TIGHT BINDING BOOK

UNIVERSAL
LIBRARY
OU_198209
UNIVERSAL
LIBRARY

# The Canara Mutual Assce. Co., Ltd.

## ನಿಜವಾದ ಗೆಳೆಯ.

"ವಿಮಾ ಕಂಪೆನಿಯ ಸರ್ವೋತ್ಕೃಷ್ಟ ಏಜಂಟನ ಗೆಳೆತನ ಮಾಡಿರಿ. ಅವನೇ ನಿಮಗೆ ನಿಜವಾದ ಗೆಳೆಯನು. ಒಮ್ಮೊಮ್ಮೆ ಹಟಸ್ವಭಾವದವನೆಂದು ನಿಮಗೆ ತೋರಬಹುದು. ಆದರೆ ಅವನ ಹಟದಲ್ಲಿ ನಿಮ್ಮ ನಿರಂತರವಾದ ಕಲ್ಯಾಣವಿರುವುದೆಂಬುದನ್ನು ಎಂದೂ ಮರೆಯಬೇಡಿರಿ. ಯೋಗ್ಯತೆಯುಳ್ಳ ವಿಮಾ ಏಜಂಟರು ಈ ಹಟಸ್ವಭಾವದವರಿಲ್ಲದಕ್ಕಾಗಿ ಅನೇಕ ವೇಳೆ ಟೀಕೆಗೆ ಪಾತ್ರರಾಗಿರುವ ಬಹಳ ಉದಾಹರಣೆಗಳನ್ನು ನಾನು ಸ್ವತಃ ನೋಡಿದ್ದೇನೆ. ತನ್ನ ಪತಿಯು ಜೀವವಿಮೆ ಇಳಿಸಲು ಇಚ್ಛೆಯುಳ್ಳವನಾಗಿದ್ದರೂ ಹಾಗೆ ಮಾಡಲಿಲ್ಲವೆಂದು ವಿಧವೆಯು ಅನ್ನುತ್ತಿದ್ದುದನ್ನು ಕೇಳಿರುತ್ತೇವೆ. ತಾವು ಸಶಕ್ತರಿದ್ದಾಗ್ಗೆ ಸಹಜವಾಗಿ ಜೀವವಿಮೆ ಇಳಿಸಲು ಬರಬಹುದಾಗಿತ್ತೆಂದೂ ಮತ್ತು ತಾವು ಈಗ ಅಶಕ್ತರಾಗಿದ್ದುದರಿಂದ ಎಷ್ಟು ಹಣ ಕೊಟ್ಟರೂ ಹಾಗೆ ಜೀವವಿಮೆ ಇಳಿಸಲು ಬಾರದ್ದರಿಂದ ಅವರೂ ಹಳಹಳಿಸಿದ್ದನ್ನೂ ನೀವು ಕೇಳಿರಬಹುದು," ಎಂದು ಮುಂತಾಗಿ (Al Smith) ಆಲ್ ಸ್ಮಿಥ್ ಎಂಬುವನು ಉದ್ಗಾರ ತೆಗೆದಿದ್ದಾನೆ.

**ಪ್ರತಿಯೊಬ್ಬನ ಮುಪ್ಪಿನ ಜೀವನದಲ್ಲಿ ವಿಮಾ ಕಂಪೆನಿಯೇ ನಿಜವಾದ ಗೆಳೆಯನು.**

**ದಿ ಕೆನರಾ ಮ್ಯುಚುವಲ್ ಅಶ್ಯುರನ್ಸ್ ಕಂಪೆನಿ, ಲಿಮಿಟೆಡ್, ಉಡುಪಿ.**

❊ ಕಾಮಧೇನು ಪುಸ್ತಕಮಾಲೆ ೧ ❊

# ತೆನೆಗಳು

೧೯೪೩—೪೪

ಕರ್ಣಾಟಕ ಸಂಘ, ಕೆನರಾ ಹಾಯ್ ಸ್ಕೂಲ್,
ಮಂಗಳೂರು

# ಬಿನ್ನಹ

ನಮ್ಮ ವಿದ್ಯಾರ್ಥಿಗಳು ಬರೆದ ಕಥೆಗಳಿಂದಲೂ ಚಿತ್ರಗಳಿಂದಲೂ ಕೆಲವನ್ನು ಆಯ್ದು ಈ ಚಿಕ್ಕ ಪುಸ್ತಕದಲ್ಲಿ ಪ್ರಕಟಿಸಲು ತುಂಬಾ ಸಂತೋಷವಾಗುತ್ತದೆ. ಜನತೆಯ ಜೀವನವನ್ನು ತುಂಬಿಸಿ ಕೊಡುವ ಸಾಹಿತ್ಯ ನಿರ್ಮಾಣವನ್ನು ಮಾಡಲು ವಿದ್ಯಾರ್ಥಿಗಳಲ್ಲಿ ತಕ್ಕ ಶಕ್ತಿಯನ್ನು ಹುರಿದುಂಬಿಸಿ, ತಕ್ಕ ತರಬೇತಿಯನ್ನು ಕೊಡುವುದು ಅಗತ್ಯವಾಗಿದೆ. ಸಾಹಿತ್ಯ ನಿರ್ಮಾಣವನ್ನು ಮಾಡುವವನಿಗೆ ದಿಗಂತದವರೆಗೂ ಹಬ್ಬುವ ದೃಷ್ಟಿಯನ್ನು ತೆರೆದು ಕೊಟ್ಟು, ಆ ದೃಷ್ಟ ದಿಗಂತವನ್ನು ಭೇದಿಸಿ ನೋಡುವಂತೆಯೂ ಮಾಡುವುದು ಅಗತ್ಯವಾಗಿರುತ್ತದೆ. ಅಷ್ಟಾಗಬೇಕಾದರೆ, ಪೂರ್ವಸಿದ್ಧತೆಯು ಅಪರಿಮಿತ ಪರಿಮಾಣದಲ್ಲಿ ಮೊದಲಿನಿಂದಲೂ ಕೂಡಿಕೊಂಡು ಬರಬೇಕಾಗುತ್ತದೆ. ಈ ದೃಷ್ಟಿಯಿಂದ, ಈ ಚಿಕ್ಕ ಪುಸ್ತಕವನ್ನು ಪ್ರಕಟಿಸಿರುತ್ತೇವೆ.

ಈ ಪುಸ್ತಕವನ್ನು ಪ್ರಕಟಿಸಲು ಪ್ರೋತ್ಸಾಹವನ್ನು ಕೊಟ್ಟ ಶಾಲೆಯ ಮುಖ್ಯೋಪಾಧ್ಯಾಯರಿಗೂ ಕರ್ಣಾಟಕ ಸಂಘವು ಆಭಾರಿಯಾಗಿರುತ್ತದೆ. ಅದಲ್ಲದೆ, ಚಿಕ್ಕವರ ಪ್ರಯತ್ನವಿದಕ್ಕೆ ತಾವು ಆಶ್ರಯವನ್ನು ಕೊಡಬೇಕು ಎಂದು ಧನಸಹಾಯವನ್ನಿತ್ತು ತಮ್ಮ ಪ್ರಕಟನೆಗಳನ್ನು ಈ ಪುಸ್ತಕದಲ್ಲಿ ಮುದ್ರಿಸಲು ಕೊಟ್ಟ ಸಂಸ್ಥೆಗಳಿಗೂ ಮಹನೀಯರಿಗೂ ಕರ್ಣಾಟಕ ಸಂಘವು ಚಿರಋಣಿಯಾಗಿರುತ್ತದೆ. ಈ ಉದ್ಯಮಕ್ಕೆ ಮುನ್ನುಡಿಯೊಂದನ್ನು ಬರೆದು ಆಶೀರ್ವದಿಸಿದ ಶಾಲೆಯ ಮೆನೇಜರರಿಗೂ ಕರ್ಣಾಟಕ ಸಂಘವು ಕೃತಜ್ಞವಾಗಿರುತ್ತದೆ.

**ಕೆನರಾ ಹಾಯ್ ಸ್ಕೂಲ್,**
**24—5—1944.**

**ಜೆ. ವಾಮನ ಭಟ್ಟ,**
**ಸಂಪಾದಕ.**

# ಪ್ರೋತ್ಸಾಹಕರು

| | | |
|---|---|---|
| ಸುರೇಶ, ಎಚ್. | V | ಫೋರ್ಮ್ |
| ವಿಷ್ಣುಮೂರ್ತಿ ಉಪಾಧ್ಯಾಯ, ಪಿ. | V | ,, |
| ರಾಮಕೃಷ್ಣ ಭಟ್ಟ, ಪಿ. | V | ,, |
| ವ್ಯಾಸರಾವ್, ಬಿ. | V | ,, |
| ಮುಕುಂದರಾಯ ಪ್ರಭು, ಎಂ. | V | ,, |
| ನಿತ್ಯಾನಂದ ಭಟ್ಟ, ಕೆ. | V | ,, |
| ಶ್ರೀನಿವಾಸ ರಾವ್, ಯು. | IV | ,, |
| ಚಂದ್ರಕಾಂತ ನಾಯಕ್, ಪಿ. | III | ,, |

# ಅನುಕ್ರಮಣಿಕೆ


| ವಿಷಯ | | ಪುಟ |
|---|---|---|
| ೧. | ಮಣ್ಣುಗೂಡಿದ ಆಸೆ— ಎಚ್. ಸುರೇಶ (V ಫೋರ್ಮ್) | ೧ |
| ೨. | ನಮ್ಮ ನಾಟಕ— ಕೆ. ಪದ್ಮನಾಭಾಚಾರ್ (V ಫೋರ್ಮ್) | ೮ |
| ೩. | ನಮ್ಮೂರ ನಿಂಗ— ಕೆ. ನಾಗೇಶ ತಂತ್ರಿ (VI ಫೋರ್ಮ್) | ೧೩ |
| ೪. | ನಮ್ಮೂರ ಯಕ್ಷಗಾನ ಸಭೆ— ವಿಷ್ಣುಮೂರ್ತಿ ಉಪಾಧ್ಯಾಯ (V ಫೋರ್ಮ್) | ೨೧ |
| ೫. | ಬಯಲಾಸೆ— ಕೆ. ರಾಮರಾಯ ನಾಯಕ್ (VI ಫೋರ್ಮ್) | ೨೮ |
| ೬. | ಆ ಚಿತ್ರ— ಯು. ಶ್ರೀನಿವಾಸ ರಾವ್ (IV ಫೋರ್ಮ್) | ೩೩ |
| ೭. | ನೆಳಲು ಬೆಳಕು— ಎಮ್. ಸಂಜೀವ ಕುಡ್ವ (V ಫೋರ್ಮ್) | ೪೦ |
| ೮. | ಸಭಾ ಭಾಷಣ— ಬಿ. ಚಂದ್ರಶೇಖರರಾವ್ (VI ಫೋರ್ಮ್) | ೪೪ |
| ೯. | ಸಾಹೇಬರ ಪತ್ರೇದಾರಿಕೆ— ಗೋಪಾಲಕೃಷ್ಣರಾವ್, ಹೊಸಬೆಟ್ಟು (V ಫೋರ್ಮ್) | ೪೭ |
| ೧೦. | ನಾಯಿಮರಿ ದಾಸು— ಪಾಂಗಾಳ ಚಂದ್ರಕಾಂತ ನಾಯಕ್ (III ಫೋರ್ಮ್) | ೫೧ |

# SRI NARAYAN GURU BANK, LTD.

(Incorporated in British India. Liability of Members Limited)

MANGALORE.

---

Shares kindly consented to be issued by the Central Government

| | |
|---|---|
| Authorised Capital | Rs. 2,00,000 |
| Issued Capital | Rs. 1,00,000 |
| Share Value | Rs. 50 |
| Entrance Fee | Re. 1 per share |

2,000 ORDINARY SHARES ISSUED

*Mangalore Jarappa,*
Managing Director

# Variety Stores,

Market Road, Mangalore,

OFFERS

A varied collection of
Choicest presentation articles
for all occasions

CHURCHWAY & STAG } brand foot-wears, Toilet requisites, Crockery, Cutlery, Hosiery, Leather Suit-cases, Hats etc., etc.

Save while you buy.

# ಮಣ್ಣುಗೂಡಿದ ಆಸೆ

ದೂಮಪ್ಪನಿಗಿನ್ನೂ ನಲ್ವತ್ತೈದು ದಾಟಿರಲಿಲ್ಲ. ಗಟ್ಟಿಮುಟ್ಟಾದ ದೇಹ. ದೂಮಪ್ಪನೇನೂ ಬರಿ ಗಿಡ್ಡಾಳುವಾಗಿರಲಿಲ್ಲ. ಪ್ರತಿ ಅಂಗಾಂಗಗಳು ಪರಿಪೂರ್ಣವಾಗಿದ್ದು ದೃಢಕಾಯನಾಗಿದ್ದನು. ಮುಖದಲ್ಲಿ ಹುರಿ ಮಾಡಿದ ಕೆಂಚುಮೀಸೆ. ತಲೆಯ ಮೇಲೆ ಹಿಂದಿನಿಂದ ಇಳಿಬಿಟ್ಟ ಜುಟ್ಟೊಂದು. ಅವನ ಸ್ವಭಾವ ಮೃದು. ಮುಖದಲ್ಲಿ ಅದೊಂದು ವಿಧದ ಸ್ಥಿರತೆ ಎದ್ದುಕಾಣುತಿತ್ತು. ಆದರೆ, ಆ ಸ್ಥಿರತೆಯ ಹಿಂದೆ, "ದುಡಿದುಡಿದು ಬೇಸತ್ತೆನು. ಆದರೆ ಆ ದುಡಿಮೆಯ ಫಲವನ್ನನುಭವಿಸುವ ಭಾಗ್ಯವೆನಗಿಲ್ಲ," ಎಂಬ ಚಿಂತೆಯು ಆಗಾಗ ಮುಖದಲ್ಲಿ ಮೂಡಿ ಮಾಯವಾಗುವಂತಿತ್ತು. ಆದರೂ ಅವನು ದುಡಿಯುವುದಕ್ಕೆ ಹಿಂದೆಗೆಯನು.

ದೂಮಪ್ಪನು ವಾಸಿಸುವುದು ಮನೆಯಲ್ಲಲ್ಲ. ಚಿಕ್ಕ ಗುಡಿಸಲಲ್ಲಿ. ಅದು ಆತನ ಗವಿಯೆನ್ನಬಹುದು. ಏಕೆಂದರೆ ಆ ಗುಡಿಸಲಿಗೆ ಕಿಟಿಕಿಗಳ ಸೌಕರ್ಯವಿರಲಿಲ್ಲ. ಒಳಗೆ ಬಹು ಕತ್ತಲೆ. ಎದುರಿಗೆ ನೆಲಕ್ಕೆ ತಾಗುವುದೋ ಎನ್ನುವಂತೆ ಇಳಿಬಿಟ್ಟಿರುವ ಮಾಡು. ಮನೆಯ ಹಿಂಗಡೆ ಒಂದು ಚಿಕ್ಕ ಹಟ್ಟಿ. ಹಟ್ಟಿಯಲ್ಲಿ ಕೋಣಗಳೆರಡು. ಒಂದು ಮೂಲೆಯಲ್ಲಿ ನೇಗಿಲು. ಮತ್ತೊಂದು ಮೂಲೆಯಲ್ಲಿ ಗೊಬ್ಬರದ ರಾಶಿ. ಮನೆಯ ಸುತ್ತುಮುತ್ತಲೆಲ್ಲಾ ಕೊಳೆ; ಕಸ. ಆದರೂ ದೂಮಪ್ಪನು ತೃಪ್ತನು. ಅವನಿಗೆ ತನ್ನ ಮನೆಯ ಮೇಲೆ, ತನ್ನ ಕುಟುಂಬದ ಮೇಲೆ, ಅತ್ಯಂತ ಆದರ; ಪ್ರೇಮ.

ಅವನ ಸಂಸಾರ—ಕುಟುಂಬ, ಬಹು ದೊಡ್ಡದು. ಮನೆತುಂಬ ಜನ. ಆದರೆ ಕಣಜ ತುಂಬ ಭತ್ತವಿಲ್ಲ. ಅವನು ಸಾಗುವಳಿ ಮಾಡು

ತಿದ್ದ ಗದ್ದೆ ರಾಮರಾಯರದು. ಪ್ರತಿವರ್ಷ ದೂಮಪ್ಪನು ಒಂದಿಷ್ಟು ಬಾಕಿಯಿಲ್ಲದೆ ತನ್ನ ಗೇಣಿಯನ್ನು ಸಲ್ಲಿಸುತಿದ್ದನು: ಹೀಗಾಗಿ ಅವನ ಸಂಸಾರಕ್ಕೆ ಅರೆ ಹೊಟ್ಟೆ ಗಂಜಿ. ತಾನು ಪರರಿಗೆ ಋಣಿಯಾಗಿರುವುದೆಂದರೆ ಅವನಿಗೆ ಸಹಿಸದು. ಆದರೆ ಹೊಟ್ಟೆಯ ಪಾಡಿಗಾಗಿ ನಾಲ್ಕೈದು ಮುಡಿ ಸಾಲ ಆಗಲೇ ಆಗಿತ್ತು. ಆ ಸಾಲ ಆದಷ್ಟು ಬೇಗ ತೀರಿಸಬೇಕೆಂದು ಅವನ ಆಸೆ. ಆದರೆ ಅವನ ಶ್ರಮವೆಲ್ಲಾ ವ್ಯರ್ಥ. ಅವನು ಒಮ್ಮೊಮ್ಮೆ ತಾನು ಕೊನೆ ವರೆಗೆ ಸಾಲದ ಪಂಗಿನಲ್ಲಿರಬೇಕಾಗುವುದಲ್ಲಾ, ಎಂದು ಯೋಚಿಸಿ ನಿಟ್ಟುಸಿರುಬಿಡುವುದಿತ್ತು.

ದೂಮಪ್ಪನು ಅಂದು ಮುಂಜಾನೆ ಎದ್ದು ತನ್ನ ಕೋಣಗಳೊಡನೆ ಹೊಲಕ್ಕೆ ತೆರಳಿದನು. ಹೆಗಲ ಮೇಲೆ ನೇಗಿಲು. ಕೈಯಲ್ಲಿ ಹಾರೆ. ಹೊಲದಲ್ಲಿ ಕೋಣಗಳನ್ನು ನೇಗಿಲಿಗೆ ಕಟ್ಟಿ ರಾಗವಾಗಿ ಹಾಡುತ್ತಾ ಕೋಣಗಳ ಬೆನ್ನು ಚಪ್ಪರಿಸುತ್ತಾ ಗದ್ದೆ ಉಳತೊಡಗಿದನು. ಅಷ್ಟರಲ್ಲಿ ಬೆಳ್ಳನೆ ಬೆಳಗಾಯಿತು. ಬೆಳಗ್ಗಿನ ಆ ಎಳೆಬಿಸಿಲು ಬಾನ ಹೊಡೆಯಿಂದ ಹೊರಹೊಮ್ಮಿ ಒಮ್ಮೆ ಮರಗಳೆಡೆಯಲ್ಲಿ ಮರೆಯಾಗಿ ಮತ್ತೊಮ್ಮೆ ಹಚ್ಚನೆಯ ಹಸುರಿನ ಮೇಲೆ ಹರಿದು ದೂಮಪ್ಪನನ್ನು ಮುಟ್ಟಿ ಮತ್ತೆ ಮುಂದೆ ಹರಡಿತು. ದೂಮಪ್ಪನು ಅತ್ಯಂತ ಉತ್ಸಾಹದಿಂದ ಒಂದು ಗಳಿಗೆ ತನ್ನನ್ನೇ ತಾನು ಮರೆತು ಗಟ್ಟಿಯಾಗಿ ರಾಗವಾಗಿ ಹಾಡಿದನು. ಆ ರಾಗದ ಧ್ವನಿ ಅಲೆಅಲೆಯಾಗಿ ಸುತ್ತಲೆಲ್ಲಾ ಸುಳಿಸುಳಿದು ಇನ್ನೂ ಸುಪ್ತಾವಸ್ಥೆಯಲ್ಲಿದ್ದ ಪಕ್ಷಿಗಳನ್ನೆಲ್ಲಾ ಎಬ್ಬಿಸಿತು. ಆಗ ಒಂದೇ ಸವನೆ ಪಕ್ಷಿಗಳು ಚಿಲಿಪಿಲಿಗುಟ್ಟಿದುವು, ಆಗ ದೂಮಪ್ಪನು ಉಳುವುದನ್ನು ನಿಲ್ಲಿಸಿ ಗಟ್ಟಿಯಾಗಿ, "ಓಹೋಯ್!" ಎಂದು ಕೂಗಿದನು. ಕೂಡಲೇ ನೆರೆಮನೆಯುವರು, ತನ್ನ ಕುಟುಂಬಿಕರು, ಬಂದು ಸೇರಿದರು. ಕೂಡಲೇ ಹೆಣ್ಣಾಳುಗಳು ತಮ್ಮ ಸೀರೆಯ ನೆರಿಯನ್ನು ಗಟ್ಟಿಯಾಗಿ ಸೊಂಟಕ್ಕೆ ಬಿಗಿದು, ಬಗ್ಗಿ, ಸಾಲಾಗಿ ನಿಂತು ಮುಕ್ತಕಂಠದಿಂದ ರಾಗವಾಗಿ ಪಾಡ್ದನ ಹಾಡುತ್ತಾ ದುಡಿಯತೊಡಗಿದರು. ದೂಮಪ್ಪನ ಉತ್ಸಾಹ ಇಮ್ಮಡಿಯಾಯಿತು. ಅವರ ರಾಗದೊಂದಿಗೆ ತಾನೂ

ಧ್ವನಿ ಸೇರಿಸಿ ಹಾಡತೊಡಗಿದನು. ಅಷ್ಟರಲ್ಲಿ ಗಂಡಾಳುಗಳು ಮುಂದಾಗಿ ನೇಜಿಯನ್ನು ಹೆಣ್ಣಾಳುಗಳಿಗೀಯುತ್ತಾ ಒಮ್ಮೆ ಅತ್ತಇತ್ತ ಹೆಜ್ಜೆಯನ್ನಿಟ್ಟು ಹಾಡುತ್ತಲೂ ಮತ್ತೆ ಸುತ್ತಲೂ ಓಡಿ ತಮ್ಮೊಳಗೆ ಪಿಸುಗುಟ್ಟುತ್ತ ಗೊಬ್ಬರವನ್ನು ಚಲ್ಲುತ್ತಲೂ ಇದ್ದರು. ಅಂತೂ ಸಂಜೆಯೊಳಗೆ ಬೆಳೆ ನೆಟ್ಟಾಯಿತು.

ದೂಮಪ್ಪನಿಗಂದು ಸುಖನಿದ್ರೆ. ತನ್ನ ದುಡಿಮೆಯು ಸಾರ್ಥಕತೆ ಹೊಂದಿತೆಂಬ ಸವಿಗನಸು ಅವನಿಗೆ. ಸಾಲ ತೀರಿಸಿ ಋಣವಿಮುಕ್ತನಾದನೆಂಬ ಸುಸ್ವಪ್ನ. ಆದರೆ ಇದ್ದಕ್ಕಿದ್ದಂತೆಯೇ ದೂಮಪ್ಪನಿಗೆ ಎಚ್ಚರವಾಯಿತು. ಕಣ್ದೆರೆದು ನೋಡಿದನು. ಹೊರಗೆ ಮಳೆ ಜಿನುಜಿನುಗಾಗಿ ಸುರಿಯುತ್ತಿದ್ದಿತು. ಮೆಲ್ಲನೆ ತಂಗಾಳಿಯು ಎಳೆಯೊಂದು ದೂಮಪ್ಪನ ಗುಡಿಸಲಲ್ಲಿ ನುಸುಳಿ, ಒಳಗೆ ಸುಳಿಸುಳಿದು ಮತ್ತೆ ಮರಳಿತು. ದೂಮಪ್ಪನ ಮೈ ಸಂತೋಷದಿಂದ ರೋಮಾಂಚಗೊಂಡಿತು. ತಾನು ಬೆಳೆ ನೆಟ್ಟುದೂ ಹನಿಹನಿ ಮಳೆ ಬಂದುದೂ ಸುಮುಹೂರ್ತವೆಂದೇ ಭಾವಿಸಿದನು. ಮತ್ತೆ ಕಣ್ಮುಚ್ಚಿ ಮಲಗಿದನು.

ಮಾರಣೆಯ ದಿನ ಮುಂಜಾನೆ ಎದ್ದು ನೋಡಿದನು. ಹೊರಗೆ ಮಳೆ ಚೆನ್ನಾಗಿ ಸುರಿಯುತ್ತಿದ್ದಿತು. ಒಯ್ಯೊಯ್ಯನೆ ಬೀಸುವ ತಂಬೆಲರು. ದೂಮಪ್ಪನು ಅದೇ ಮಳೆಯಲ್ಲಿಯೇ ಹೊಲಗಳ ಬಳಿ ಹೊರಟನು. ಗದ್ದೆ ತುಂಬ ನೀರು; ಆದರೆ ನೆಟ್ಟ ಬೆಳೆ ಮುಳುಗಿರಲಿಲ್ಲ. ದೂಮಪ್ಪನು ರಾತ್ರಿಯ ಸುಖಸ್ವಪ್ನಗಳನ್ನು ನೆನೆದನು. ಅದಕ್ಕೆ ಸರಿಯಾಗಿ ಒಂದೇ ಸವನೆ ಸುರಿಯುತ್ತಿರುವ ಮಳೆ. ಎಲ್ಲವೂ ತನಗನುಕೂಲವಾಗಿಯೇ ಇದೆಯೆಂದು ಅವನ ಭಾವನೆ. ಆದರೆ ಇನ್ನು ಹೆಚ್ಚು ಮಳೆ ಬರುವುದೊಳಿತಲ್ಲವೆಂಬ ಯೋಚನೆ ಒಮ್ಮೆ ಅವನ ಮನದಲ್ಲಿ ಮೂಡಿ ಮರಳಿತು. ಮತ್ತೆ ನೀರಿನಿಂದ ತೊಯ್ದವನಾಗಿ ಹಿಂದಿರುಗಿದನು.

ನಾಲ್ಕೈದು ದಿನಗಳಾದುವು. ಮಳೆಯು ಒಂದೇ ಸವನೆ ಬರತೊಡಗಿತು. ಆಕಾಶವಿಡೀ ಕಾರ್ಮುಗಿಲಿಂದ ತುಂಬಿ, ಕಪ್ಪು ಮುಸು

ಕಿತು. ಮನೆಯಿಂದ ಹೊರಗೆ ಕಾಲಿಡಲು ಸಾಧ್ಯವಿಲ್ಲ. ದೂಮಪ್ಪನು ಬೆದರಿದನು. "ಮಳೆಯು ಒಮ್ಮೆ ಕಡಿಮೆಯಾಗಲಿ," ಎಂದು ದೇವರನ್ನು ಪ್ರಾರ್ಥಿಸಿದನು. ಆದರೂ ವ್ಯರ್ಥ. ಮಳೆ ಹನಿ ಕಡಿಯಲಿಲ್ಲ. ನೀರು ಧಾರಾಕಾರವಾಗಿ ಸುರಿಯಿತು. ದೂಮಪ್ಪನು ಪ್ರಳಯಕಾಲದ ರೌದ್ರಾವತಾರವಿದೇಯೋ ಏನೋ ಎಂದು ಮನದಲ್ಲೇ ಅಳುಕಿದನು. ಅಂದು ತನ್ನ ಸರ್ವನಾಶವಾಗುವುದೆಂದು ಮನಗಂಡನು.

ನೀರು ಗಳಿಗೆಯಿಂದ ಗಳಿಗೆಗೆ ಏರತೊಡಗಿತು. ಅಷ್ಟರಲ್ಲಿ ಅದೊಂದು ಕೂಗು ಮಳೆಯಿಂದ ಹೊರಹೊಮ್ಮಿದಾ ಧ್ವನಿಯನ್ನು ಭೇದಿಸಿ ರೈತರ ಅಂತರಾಳವನ್ನು ಹೊಕ್ಕು, ಅವರ ಹೃದಯದಲ್ಲಿ ಪ್ರತಿಧ್ವನಿಗೆಯ್ದಿತು. "ನೆರೆಹಾವಳಿ!" ದೂಮಪ್ಪನು ಹೊಲಗಳ ಬಳಿ ಓಡಿದನು. ನೀರು! ಇನ್ನೂ ಉಕ್ಕೇರುತಲಿದೆ. ಮಳೆ ನಿಂತಿರಲಿಲ್ಲ. ದೂಮಪ್ಪ ಅರೆಗಳಿಗೆ ರೆಪ್ಪೆ ಎವೆಯಿಕ್ಕದೆ ತನ್ನ ಧನಿಯ ಮನೆಯನ್ನು ನೋಡಿದನು. ಮತ್ತೆ ಭಾರವಾದ ಹೆಜ್ಜೆಗಳನ್ನಿಡುತ್ತಾ ಬಿಸುಸುಯ್ಯುತ್ತಲೂ ಹಿಂತೆರಳಿದನು.

ನಾಲ್ಕೈದು ದಿನಗಳಲ್ಲಿ ಮಳೆ ನಿಂತಿತು. ನೆರೆ ನೀರಿಳಿಯಿತು. ದೂಮಪ್ಪ ಹೊಲಗಳ ಬಳಿ ನಡೆದನು. ಆದರೆ....ಆದರೆ....ಎಲ್ಲವೂ ಬರಿದು! ಬರಿದು! ತನ್ನ ಹೃದಯವೂ ಬರಿದು!

ಮೂರು ನಾಲ್ಕು ತಿಂಗಳುಗಳುರುಳಿದುವು. ಗೇಣಿ ಕೊಡುವ ಕಾಲ ಬಂದಿತು. ದೂಮಪ್ಪನಿಗೆ ಏನೂ ತೋಚದಾಯಿತು. ಮೆಲ್ಲನೆ ಬರಿಗೈಯಿಂದ ಧನಿಯ ಮನೆಗೆ ತೆರಳಿದನು. ಧನಿಯ ಮುಖವನ್ನು ನೋಡುವ ಧೈರ್ಯ ಅವನಿಗಿಲ್ಲ. ದೂಮಪ್ಪ ಸದ್ದಿಲ್ಲದೆ ತಲೆ ತಗ್ಗಿಸಿ, ಹೊರ ಬಾಗಿಲ ಮರೆಯಲ್ಲಿ ನಿಂತನು. ರಾಮರಾಯರು ಅದಾಗಲೇ ನಿದ್ರೆಯಿಂದೆದ್ದು ಹೊರಬಂದರು. ಹೊರಗೆ ದೂಮು! ಬರಿಗೈ! ಏನೋ ಬೇಡಲು ಬಂದಿದ್ದಾನೆ!—ಎಂದವರಾಗಲೇ ಊಹಿಸಿ ಕಿಡಿಕಿಡಿಯಾದರು!

"ಏನು, ದೂಮು?" ಎಂದು ಏರಿಕೆಯ ಸ್ವರದಲ್ಲೇ ಕೇಳಿದರು.

ದೂಮಪ್ಪ ನಡುಗಿದನು.

"ಇದೇನಿದು ಬರಿಗೈ?"

ದೂಮಪ್ಪನಿಗೆ ಆಕಾಶವೇ ಕಳಚಿ ತನ್ನ ತಲೆಯ ಮೇಲೆ ಬಿದ್ದಂತಾಯಿತು. ಮೆಲ್ಲನೆ ರಾಮರಾಯರಿಗೆ ಅಡ್ಡಬಿದ್ದು ಬೇಡಿದನು.

"ಅಯ್ಯಾ ...ಇಲ್ಲ....ಅಯ್ಯಾ....ಇನ್ನು ಮುಂದೆ ಹೀಗಾಗದು. ನಾನು ನಿಮ್ಮ ಗೇಣಿಯನ್ನು ಇದುವರೆಗೆ ಬಾಕಿ ಮಾಡಿಲ್ಲ. ಆದರೆ ಈ ವರ್ಷ ನೆರೆ....ಯಿಂದಾಗಿ ನನ್ನ ಬೆಳೆ ಹೋಯಿತು. ಮನೆಯಲ್ಲಿ ಮೊದಲೇ ಊಟಕ್ಕಿ....ಲ್ಲ...."

ಇಷ್ಟು ಕೇಳುವುದೇ ರಾಮರಾಯರಿಗೆ ಸಹಿಸದಾಯಿತು. ರಾಮರಾಯರೇನೋ ಧನಿಕರು. ರೈತರ ನೆತ್ತರು ಸುರಿಸಿ ಸಂಪಾದಿಸಿದ ಹಣವಿದೆ. ಆದರೆ ಅವರು ಇನ್ನೂ ಅತೃಪ್ತರು. ಅವರು ಸಿಟ್ಟಿನಿಂದ ಬೆಂಕಿಯಾದರು.

"ಸಾಕು! ನಿನ್ನ ಕಟ್ಲೆ ಭಾಗೀರಥಿಪುರಾಣ. ಹುಂ! ನೆರೆಯಂತೆ, ನಿನ್ನಿಂದ ನನ್ನ ಗೇಣಿ ಕೊಡುವುದಾಗದಿದ್ದರೆ ಎಲ್ಲಿಂದಾದರೂ ಸಾಲ ಮಾಡಿಯಾದರೂ ನನ್ನ ಗೇಣಿಯನ್ನು ಸಲ್ಲಿಸು," ಎಂದರು.

ಸಾಲ! ದೂಮಪ್ಪನು ನಡುಗಿದನು. ಸಾಲ! ಮತ್ತೆ ಮತ್ತೆ ಅದೇ ನುಡಿ ಅವನ ಹೃದಯದಲ್ಲಿ ಪ್ರತಿಧ್ವನಿಸತೊಡಗಿತು. ತಾನು ಮಾಡಿದ ಸಾಲದ ನೆನಪು ಅವನ ಮನವನ್ನು ಹೊಕ್ಕು ಮತ್ತಷ್ಟು ಅಧೀರನನ್ನಾಗಿ ಮಾಡಿತು. ಅವನ ಹೃದಯ ನಡುಗಿತು. ತುಟಿ ಅದುರಿತು. ಇಲ್ಲ! ಸಾಧ್ಯವಿಲ್ಲ! ಮೆಲ್ಲನೆ ತಲೆಬಾಗಿ—

"ಇಲ್ಲ .......ಅಯ್ಯಾ........ಸಾಲ ನನ್ನಿಂದಾಗದು. ನನಗೆ ಈ ಮೊದಲೇ ಬೇಕಾದಷ್ಟು ಸಾಲ ಆ...." ರಾಮರಾಯರ ಕಣ್ಣು ಕೆರಳಿತು! ಕಣ್ಣ ಹುಬ್ಬು ಹಾರಿಸುತ್ತಾ ಸಿಟ್ಟಿನಿಂದ ಥರಥರ ನಡುಗುತ್ತಾ, "ಏನು, ದೂಮಾ! ನನ್ನ ಸ್ಥಳದಲ್ಲಿದ್ದು ಇದೀಗಲೇ ಸಾಲ. ನಡಿ! ನಡಿ! ನಿನಗೆ ಸಾಧ್ಯವಿಲ್ಲದಿದ್ದರೆ ಎಲ್ಲಿಯಾದರೂ ಬೀದಿಯ ಭಿಕಾರಿಯಂತೆ ಸಾಯುವುದೊಳ್ಳಿತು!" ಎಂದು ನುಡಿದವರೇ ದೂಮನನ್ನು ನೋಡದೆ ಒಳಗೆ ನಡೆದೇಬಿಟ್ಟರು ರಾಮರಾಯರು.

"ಹೌದು....ಬೀದಿಯ ಭಿಕಾರಿ....ಹೌದು!" ಎಂದು ದೂಮಪ್ಪ ತನ್ನ ಮನದಲ್ಲೇ ನುಡಿದವನೇ ಮೆಲ್ಲನೆ ಹೊರಟನು. ತಾನು ಇದು ವರೆಗೂ ತಪ್ಪಿಲ್ಲ. ಆದರೂ ತನ್ನ ಧನಿಗೆ ತನ್ನ ಮೇಲೆ ಕರುಣೆಯಿಲ್ಲ ವಲ್ಲಾ! ಎಂದೇ ಅವನ ಚಿಂತೆ. ದೂಮಪ್ಪನು ಮುಂದರಿದಂತೆ ಸಾಲದ ಯೋಚನೆ ಅವನ ಮನಸ್ಸಿನಲ್ಲಿ ಕೆಳಕೆಳಗಿಳಿದು ಕದಡಿಸಿತು. ಸಾಲವೇ ಶೂಲ! ಮತ್ತೆ ಮತ್ತೆ ಇದು ಅವನ ಹೃದಯವನ್ನಿರಿಯತೊಡ ಗಿತು. ತಾನು ಸಾಲ ಮಾಡಿದ ದಿನ ಅವರಿಗೆ ಕೊಟ್ಟ ಭಾಷೆ! ಆದರೆ ಇಂದು? ಆಡಿದಂತೆ ನಡೆಯಲಾಗದ ಕಡು ನೀಚನೆಂದು ತನ್ನನ್ನೇ ತಾನು ಹಳಿದುಕೊಂಡನು. ಅವನ ಕಿವಿಯಲ್ಲಿ ಒಂದೇ ಧ್ವನಿ: ಸಾಲ! ಕಣ್ಣಲ್ಲಿ ಒಂದೇ ದೃಶ್ಯ: ಸಾಲದ ಶೂಲ! ಹೃದಯದಲ್ಲಿ ಒಂದೇ ನುಡಿ: ಪರರ ಋಣ! ಇದಕ್ಕೆ ಸರಿಯಾಗಿ ತಾಳಹಾಕುವಂತೆ ಬಿಸಿಯುಸಿರು!

ಆಗ, "ಏನು ದೂಮಾ! ನಮ್ಮ ಹಣಕ್ಕೇನು ಗತಿ?" ಎಂದು ಕೇಳುತ್ತಲೇ ಬಂದರು ಸಾಹುಕಾರ ಶೀನಪ್ಪನವರು. ದೂಮಪ್ಪನು ಮೌನಿ. ತಲೆಯೆತ್ತನು, ಒಂದು ಹನಿ ಕಣ್ಣೀರುದುರಿತು. "ನಾಳೆ ಯೊಳಗೆ ಸಾಲವನ್ನು ತೀರಿಸದಿದ್ದರೆ, ಜಾಗ್ರತೆ!" ಎಂದು ಜೋರಿಸಿಂದಲೇ ನುಡಿದು ಕಣ್ಣು ಕೆರಳಿಸಿ, ಮೂಗು ಅರಳಿಸಿ, ಮೀಸೆ ಹುರಿಮಾಡಿ ರಾಮ ರಾಯರನ್ನು ಕರೆಯುತ್ತ ಅವರ ಮನೆಯನ್ನು ಸಾಹುಕಾರರು ಹೊಕ್ಕರು.

ದೂಮಪ್ಪನು ಸಿಂತಲ್ಲೇ ಕಲ್ಲಿನಂತಾದನು. ಅವನಿಗೆ ಹಾದಿ ತೋಚದಂತಾಯಿತು. ತಾನಿಷ್ಟು ದುಡಿದು ವ್ಯರ್ಥ. ರೈತನ ಬಾಳು ಹಾಳೆಂದು ತಿಳಿದನು. ತಾನು ಪರರಿಗಾಗಿ ಜೀವಹಿಂಡಿ ದುಡಿದರೂ ಪರರ ಋಣವೇ ತನಗೆ ಗತಿಯಾಯಿತೇ? ಇದು ಅವನಿಗೆ ಸಹಿಸದಾ ಯಿತು. ದೂರದಲ್ಲಿ ತನ್ನ ಗುಡಿಸಲ ಹಿಂಗಡೆ ಕೋಣಗಳು ಮೇಯುತ್ತಿ ರುವುದನ್ನು ಕಂಡನು. ಅತ್ತ ಗೋಡೆಗೆ ತಾಗಿ ನಿಂತಿದ್ದ ನೇಗಿಲನ್ನು ಕಂಡನು. ಒಂದು ನಿಟ್ಟುಸಿರು ಅವನಿಗೆ ತಿಳಿಯದೆ ಹೊರಹೊಮ್ಮಿತು. ಮತ್ತೆ ಮೊಗದಿರುಹಿ ನಡೆದನು. ಅದೆಲ್ಲಿಗೂ ಯಾರೂ ಅರಿಯರು.

× × × × ×

ಆರೇಳು ವರ್ಷಗಳುರುಳಿದುವು. ರಾಮುರಾಯರಿಗಿಂದು ಪಶ್ಚಾತ್ತಾಪ. ಅವರಿಗೆ ಈಗ ಆರೇಳು ವರ್ಷಗಳಿಂದ ಗೇಣಿಯೇ ಇಲ್ಲ. ಈಗ ಅವರಿಗೆ ದೂಮನಿರುತ್ತಿದ್ದರೆ ಹೀಗಾಗುತ್ತಿರಲಿಲ್ಲ ಎಂಬುದರ ಅರಿವಾಯಿತು. ಆದರೆ ಕೆಲಸವು ಕೈಮೀರಿ ಹೋಗಿತ್ತು.

ಇಂದು ಶ್ರಾವಣ ಮಾಸ. ಪೈರು ತೆನೆಬಿಡುವ ಕಾಲ. ಅದಾರೋ ಒಬ್ಬ ಭಿಕ್ಷುಕನು ರಾಮುರಾಯರ ಹೊಲಗಳ ಬಳಿ ನಡೆಯುತ್ತಿದ್ದನು. ಸುತ್ತಲೂ ಹಾಳುಬಿದ್ದ ಹೊಲಗಳು. ಪೈರು ಬಲಿತು ಕಲೆತು ಹಸುರು ಹಬ್ಬಿದಂತಿರುವ ಬದಲು ಚದರಿ, ಒಣಗಿ, ಸೊರಗಿ ಮುದುಡಿದೆ. ಭಿಕ್ಷುಕನು ಸುತ್ತಲೂ ದೃಷ್ಟಿ ಪಸರಿಸಿದನು. ಎತ್ತ ನೋಡಿದತ್ತ ಒಂದೇ ದೃಶ್ಯ. ಹೊಲದ ನೆಲ ನೀರಿನಿಂದ ತುಂಬಿದ್ದು ತಂಪು ಹರಡಿರುವ ಬದಲು ಚೆನ್ನಾಗಿ ಕಾದು ಬಾಯ್ಬಿಡುವಂತಿದೆ. ಭಿಕ್ಷುಕನ ಕಣ್ಣಿಂದ ಒಂದು ಹನಿ ನೀರುದುರಿತು. ಮತ್ತೆ ನಾಲ್ಕು ಹೆಜ್ಜೆ ಅತ್ತ ಸರಿದನು. ಎದುರಿಗೆ ಹಾಳುಬಿದ್ದ ಗುಡಿಸಲು. ಗುಡಿಸಲೆದುರು ಇಂದೋ ನಾಳೆಗೋ ಸಾಯಲಿರುವ ಸಸಿಗಳೆರಡು. ಬಳಿಯಲ್ಲೇ ನೇಗಿಲು. ಭಿಕ್ಷುಕನು ಮೆಲ್ಲನೆ ನೇಗಿಲನ್ನು ಮುಟ್ಟಿದನು. ಗೆದ್ದಲು ಹಿಡಿದಿವೆ. ಅಯ್ಯೋ! ಎಂದವನೆ ಆ ಮುರುಕಲು ನೇಗಿಲನ್ನು ಬಲವಾಗಿ ಹಿಡಿದನು. ಭಿಕ್ಷುಕನ ಹೃದಯವು ಒತ್ತಿದಂತಾಯಿತು. ಕರುಳು ಹಿಂಡಿದಂತಾಯಿತು. ಅವನ ನೆರಿಬಿದ್ದ ಕೆನ್ನೆಗಳೆರಡು ಕಂಬನಿಯಿಂದ ತೊಯ್ದುಹೋದುವು. ಮತ್ತೆ ಸ್ಥಿರವಾಗಿ ನಿಂತನು.

ಅಷ್ಟರಲ್ಲಿ ರಾಮುರಾಯರು ಅಲ್ಲಿಗೆ ಬಂದರು. ದೂರದಲ್ಲಾರೋ ಭಿಕ್ಷುಕ! ರಾಮುರಾಯರು ಅವನನ್ನು ನೋಡಿ ಬಳಿ ಸಾರಿದರು. ಒಂದರೆಗಳಿಗೆ ದಿಟ್ಟಿಸಿದರು.

ಮತ್ತೆ, "ದೂಮಾ!" ಎಂದು ಕೂಗಿ ಕರೆದರು.

ಹಾದು....ದೂಮು! ದೂಮಪ್ಪನು ಫಕ್ಕನೆ ಬೆದರಿ ಹಿಂದಿರುಗಿ ನೋಡಿದನು. ರಾಮುರಾಯರದು ನೆಟ್ಟ ನೋಟ! ದೂಮನು ಸ್ತಬ್ಧನಾದನು. ಮತ್ತೆ ಅತ್ತ ಇತ್ತ ನೋಡದೆ ಮುನ್ನಡೆದನು.

**— ಎಚ್. ಸುರೇಶ,**

(V ಫೋರ್ಮ್)

# ನಮ್ಮ ನಾಟಕ

ಒಂದು ನಮಗೆ ಬೇಸಿಗೆ ರಜೆ ಸಿಕ್ಕಿದ ಮೊದಲನೆಯ ದಿನವಾಗಿತ್ತು. ನಮ್ಮ ಕೂಟವು ನಮ್ಮ ಮನೆಯ ಹೊರಜಗಲಿಯಲ್ಲಿ ಕಲೆತಿತ್ತು. ಅದೇನೊ ಎಲ್ಲರೂ ನಿಶ್ಶಬ್ದದಿಂದ ಕೂಡಿದವರಾಗಿದ್ದರು. ಆದರೆ ಕಿಟ್ಟು ನಿಶ್ಶಬ್ದತೆಯನ್ನು ಭೇದಿಸಿ, "ರಾಮು, ಅದೇಕೊ ನನಗೆ ಈ ರಜೆಯನ್ನು ಸಂತೋಷದಲ್ಲಿ ಕಳೆಯಬೇಕೆಂದು ಮನಸ್ಸಾಗುತಿದೆ. ಅದಕ್ಕೆ ನಾವು ಏನು ಮಾಡುವುದು?" ಎಂದನು. "ಕಿಟ್ಟು, ರಜೆಯಲ್ಲಿ ವಿಹಾರಕೂಟ ವನ್ನು ಮಾಡಿದರೆ ಒಳ್ಳೆಯದಲ್ಲ?" ಎಂದು ರಾಮು ಹೇಳಿದನು. ಆಗ ನಾನು, "ರಾಮು, ವಿಹಾರಕೂಟವೇನೊ ಒಳ್ಳೆಯದು. ಆದರೆ ಅದಕ್ಕೆ ತುಂಬಾ ತೊಂದರೆಯಿದೆಯಲ್ಲ. ಅದಕ್ಕಿಂತ ಒಂದು ನಾಟಕವನ್ನು ಮಾಡಿದರೆ ಒಳ್ಳೆಯದು," ಎಂದೆ. ಎಲ್ಲರೂ ಸಮ್ಮತಿಸಿದರು. ಸಭೆಯು ಮುಕ್ತಾಯಗೊಂಡಿತು.

ಮರುದಿನ ನಾವೆಲ್ಲರೂ ನಮ್ಮ ಮನೆಯಲ್ಲಿ ಕಲೆತೆವು. ನಮ್ಮ ಈ ಕೂಟದಲ್ಲಿ ನಾವು ನಾಲ್ಕೆ ಮಂದಿ. ರಾಮು, ಹಣವಂತನಾದು ದರಿಂದ ಪೋಷಕ. ನಾನು ನಾಯಕ. ಕಿಟ್ಟು ಕಾರ್ಯದರ್ಶಿ. ರಂಗ ದೂರದರ್ಶಿ ಅಥವಾ ಖಾಲಿ ಮೆಂಬರು. ನಾವು ಎಲ್ಲರೂ ಒಟ್ಟುಗೂಡಿದ್ದರೂ, ಪೋಷಕನಾದ ರಾಮು ಇನ್ನೂ ಬಂದಿರಲಿಲ್ಲ. ಆದುದರಿಂದ ನಮ್ಮ ಸಭೆಯು ಮೊದಲಾಗಿರಲಿಲ್ಲ. ಸ್ವಲ್ಪ ಹೊತ್ತಿನಲ್ಲಿ ಅವನು ನಮ್ಮೊಡನೆ ಸೇರಿ ನಮ್ಮಲ್ಲಿ ಚತುರ್ಥನಾಗಿಬಿಟ್ಟನು.

ರಾಮು ಬಂದೊಡನೆ ಸಭೆಯು ಮೊದಲಾಯಿತು. ನಾಟಕದ ವಿಷಯವು ಚರ್ಚೆಗೆ ಬಂತು. ಮೊದಲ ಪ್ರಶ್ನೆ—ನಾಟಕವೆಲ್ಲಿ? ರಾಮುವು ನಮ್ಮ ವರಾಂಡದಲ್ಲಿ ಮಾಡುವ ಎಂದ. ಎಲ್ಲರೂ ಒಪ್ಪಿದೆವು.

ಇನ್ನುಳಿದುದು ನಾಟಕ ಯಾವುದೆಂದು. ರಂಗನು, "ನನ್ನ ಅಣ್ಣನು ಒಂದು ನಾಟಕ ಬರೆದಿದ್ದನು. ಅದನ್ನು ತಂದಿರುವೆನು," ಎಂದು, ನನ್ನೊಡನೆ ಆ ನಾಟಕವನ್ನು ಕೊಟ್ಟ. ನಾಟಕದ ಹೆಸರು "ಗ್ಯಾರಟಿ ಕಂಪೆನಿಯ ಗ್ಯಾಸ್‌ಮಾಸ್ಕ್" ಎಂದು. ಹೆಸರು ದೊಡ್ಡದಾದರೂ ಕಥೆ ಸಣ್ಣದಿದ್ದುದರಿಂದ ಎಲ್ಲರೂ ಅದಾಗಬಹುದೆಂದು ಒಪ್ಪಿದರು. ಪಾತ್ರಗಾರರು ಕಡಿಮೆ. ಆದರೆ ನನಗೆ ಈ ನಾಟಕವನ್ನು ಆಡಲು ಮನಸ್ಸಿರಲಿಲ್ಲ. ಯಾಕೆಂದರೆ ಅದರಲ್ಲಿ ಗ್ಯಾಸ್‌ಮಾಸ್ಕ್, ಟೆಲಿಫೋನ್ ಮೊದಲಾದುವು ಬೇಕು. ಇದಕ್ಕೆಲ್ಲಾ ಏನು ಮಾಡುವುದು ಎಂದು ಬಗೆಹರಿಯಲಿಲ್ಲ. ಕಾರ್ಯದರ್ಶಿಯಾದ ಕಿಟ್ಟುವನ್ನು ವಿಚಾರಿಸಿದೆ. ಅವನು ಗ್ಯಾಸ್‌ಮಾಸ್ಕನ್ನು ಕಾಗದದಿಂದ ಮಾಡಿದರಾಯಿತು ಎಂದ. ಹಾಗಾದರೆ ಅದನ್ನು ನೀನೆ ಮಾಡು ಎಂದು ಅವನಿಗೆ ಆಜ್ಞೆಯಿತ್ತೆ.

ಇನ್ನು ಟೆಲಿಫೋನ್. ಮೊನ್ನೆ ರಥೋತ್ಸವದಲ್ಲಿ ತಮ್ಮನಿಗೆ ಒಂದು ಟೆಲಿಫೋನನ್ನು ತೆಗೆದುಕೊಟ್ಟಿದ್ದರು. ಅವನನ್ನು ಕರೆದೆ. ಬಂದ. ಅವನೊಡನೆ ಟೆಲಿಫೋನನ್ನು ವಿಚಾರಿಸಿದೆ. "ಯಾಕಣ್ಣ?" ಎಂದ. ನಾನು ನಾಟಕಕ್ಕೆ ಬೇಕೆಂದೆ. "ಪಾರ್ಟ ಕೊಟ್ಟರೆ ಕೊಡುವೆನು," ಎಂದ. "ನಿನಗೆ ಭೀಮನ ಪಾರ್ಟ," ಎಂದೆ. ಅದಕ್ಕೆ ಎಲ್ಲರೂ ಗೊಳ್ಳೆಂದು ನಕ್ಕರು. ಅವನು ಕೂಗಲು ತೊಡಗಿದನು. ಆಗ ಅಡಿಗೆಕೋಣೆಯಿಂದ ತಾಯಿಯ ಸ್ವರವು ಕೇಳಿಸಿತು. ನಮ್ಮ ಕೂಟವು ಪಲಾಯನ ಮಾಡಿತು.

## ೨

ಅದೇನೊ—ನಾಟಕ ಎಲ್ಲಿ? ನಾಟಕ ಯಾವುದು?—ಸುಲಭದಲ್ಲಿ ಮುಗಿಯಿತು. ಇನ್ನು ಉಳಿದಿತ್ತು ಪರದೆಯ ವಿಚಾರ. ಈ ವಿಚಾರವು ಚರ್ಚೆಗೆ ಬಿತ್ತು. ಫಕ್ಕನೆ ದೂರದರ್ಶಿಯಾದ ರಂಗನು, "ಶಾಲು ಹಿಡಿದರಾಯಿತು" ಎಂದ. ನಾನು ಕೋಪದಿಂದ "ಥೂ, ಮಂಗ! ಇಲ್ಲಿ ಶಾಲು ಹಿಡಿಯಲು ನಿನ್ನ ಮದುವೆಯೆ? ಇದು ನಾ....ಟ...ಕಾ ತಿಳಿಯಿತೇ?" ಎಂದೆ.

ಆಗ ರಾಮು, "ಹಾಗಲ್ಲ...." ಎನ್ನುವಷ್ಟರಲ್ಲಿ ನಾನು, "ಹಾಗಲ್ಲ, ತೊಂಡೆ! ಆ ಮಂಕನಿಗೇನು ಗೊತ್ತು? ಶಾಲಂತೆ, ಶಾಲು! ಅಲ್ಲ, ನಾಟಕವೆಂದರೆ ಏನೆಂದು ತಿಳಿಯದ ಅವ ಮಾತನಾಡಿದುದು ಯಾಕಂತೆ?" ಎಂದೆ. ಎಲ್ಲರೂ ನನ್ನನ್ನು ಸಂತೈಸಿದರು. ಫಕ್ಕನೆ ನನ್ನ ಮನಸ್ಸಿನಲ್ಲಿ ಮಿಂಚಿನಂತೆ ಒಂದು ಆಲೋಚನೆಯು ಹೊಳೆದು ಮಾಯವಾಯಿತು. ಹೊಳೆದುದೇ ತಡ. ಅದನ್ನು ಸಭೆಯ ಮುಂದಿಟ್ಟೆ: ಪರದೆಯನ್ನು ಕಾಗದದಿಂದ ಯಾಕೆ ಮಾಡಬಾರದು?

"ಸರಿ, ಅದೇ ಸರಿ!" ಎಂದು ಎಲ್ಲರ ಬಾಯಿಂದಲೂ ಉದ್ಗಾರ ಹೊರಟಿತು.

ಕಾಗದಕ್ಕೆ ಏನು ಮಾಡುವುದು? ಪ್ರತಿಯೊಬ್ಬರು ತಮ್ಮ ತಮ್ಮ ಪುಸ್ತಕದ ಹಾಳೆಗಳನ್ನು ತರುವುದೆಂದು ನಿಶ್ಚಯವಾಯಿತು. ಮೊದಲಿನ ಪರದೆ ವಸ್ತ್ರದಿಂದ. ಉಳಿದುದು ಕಾಗದದಿಂದ. ಇನ್ನು ಅದರ ಮೇಲೆ ಬಣ್ಣ ಬರೆಯಬೇಡವೆ? ನಮ್ಮಂತಹ ಚಿತ್ರಗಾರರು ಕೂಟದಲ್ಲಿರುವಾಗ ಅದಕ್ಕೇನು ತೊಂದರೆ? ಅಣ್ಣನೊಡನೆ ಬೇಡಿ ಕಾಡಿ ಬಣ್ಣಗಳನ್ನು ಪಡೆದು ಬಣ್ಣ ಬಳೆಯಲು ಕೂತೆವು. ಬಹಳ ಕಷ್ಟಪಟ್ಟು ಎರಡು ಗಂಟೆಯ ತರುವಾಯ ಬಣ್ಣ ಬಳೆದು ಪೂರ್ತಿಯಾಯಿತು. ನಮಗೆ ಪರದೆಯು ದೂರದಿಂದ ನೋಡುವಾಗ ಚಂದವಾಗಿ ತೋರಿತು; ಸಂತೋಷವಾಯಿತು. ಅಂತೂ ಪರದೆಯ ಸಂಗತಿ ಮುಗಿಯಿತು.

ಇನ್ನು ಉಡಿಗೆತೊಡಿಗೆಗಳ ವಿಚಾರ. ಅದು ದೂರದರ್ಶಿಯಾದ ರಂಗನ ಪಾಲಿಗೆ ಬಿತ್ತು. ಕುರ್ಚಿಮೇಜುಗಳು ನನ್ನ ಪಾಲಿಗೆ. ಇನ್ನು ಬಣ್ಣದ ಕಾಗದ, ರಟ್ಟೆ ಮೊದಲಾದುವು ಪೋಷಕನಾದ ರಾಮುವಿನ ಪಾಲಿಗೆ. ನಾಟಕದ ಸಲಕರಣೆಗಳೆಲ್ಲಾ ಆದುವು. ಇನ್ನು ನಾಟಕವೊಂದೆ ಬಾಕಿ.

ಈ ಸಲಕರಣೆಗಳಿಗೆಲ್ಲಾ ರಾಮುವಿನ ಕಿಸೆಯಿಂದ ಸ್ವಲ್ಪ ಸ್ವಲ ಹಣ ಬಿತ್ತಂತೆ. ಅದನ್ನು ಪುನಃ ತುಂಬಿಸಿಕೊಳ್ಳಬೇಡವೆ? ಅದ

ಕ್ಕೇನು ಮಾಡುವುದೆಂದು ರಾಮು ನನ್ನೊಡನೆ ವಿಚಾರಿಸಿದನು. ನಾನು ಅದನ್ನು ಸಭೆಯ ಮುಂದಿಟ್ಟೆ. ಕೆಲವರು, "ವಂತಿಗೆ ಎತ್ತುವ," ಎಂದರು. ಕೆಲವರು, "ಟಿಕೇಟಿಡುವ," ಎಂದರು. ವಂತಿಗೆ ಎತ್ತುವುದು ಬೇಡುವ ಕೆಲಸ. ಆದುದರಿಂದ ಟಿಕೇಟಿಡುವುದೇ ನನಗೆ ಸಮಂಜಸವೆನಿಸಿತು. ಆದುದರಿಂದ ನಾವು ಕೈಬರಹದ ಒಂದೈವತ್ತು ಟಿಕೇಟುಗಳನ್ನು ತಯಾರಿಸಿದೆವು. ಟಿಕೇಟೊಂದರ ಅರ್ಧಾಣೆಯೆಂದು ನಿಶ್ಚಯಿಸಿದೆವು. ದೊಡ್ಡವರಿಗೆ ಬೆಂಚು. ಸಣ್ಣವರಿಗೆ ಚಾಪೆ. ಸಾಕು, ಹೆಚ್ಚಾಯಿತು ಎಂದು ನೆನಸಿದೆವು. ಅಷ್ಟರಲ್ಲಿ ತಮ್ಮನು ತನಗೊಂದು ಟಿಕೇಟು ಕೊಡಬೇಕೆಂದು ಹೇಳಿದನು. ನಾನು ಹಣವನ್ನು ಕೇಳಲು, "ಹಾಗಾದರೆ ಟೆಲಿಫೋನನ್ನು ಕೊಡುವುದಿಲ್ಲ," ಎಂದನು. ಆಗ ನನಗೆ ಏನು ಮಾಡುವುದೆಂದು ತೋಚಲಿಲ್ಲ. ಉಪಾಯ ಕಾಣದೆ ಟಿಕೇಟನ್ನು ಕೊಟ್ಟೆನು.

ಅಂತೂ ಕೆಲವು ದಿವಸಗಳಲ್ಲಿ ನಾಲ್ಕಾರು ಟಿಕೇಟುಗಳು ಮಾರಿ ಹೋದುವು. ನಮ್ಮಿಂದ ಬಿದ್ದ ಹಣವು ಪುನಃ ಹಸ್ತಗತವಾಯಿತು. ಇನ್ನು ನಮಗೆ ನಾಟಕ ಆಡುವುದೊಂದೆ ಉಳಿದಿದ್ದತು.

೩

ಇಂದು ನಮ್ಮ ನಾಟಕ. ಆರು ಗಂಟೆಗೆ ಸುರು. ಈಗಿನ ಸಮಯವೊ, ಮೊದಲಿನ ಸಮಯವೊ ಎಂದು ಕೇಳಬೇಡಿ. ಮೊದಲಿನ ಸಮಯಕ್ಕೂ ನಮಗೂ ಏನೂ ಸಂಬಂಧವಿಲ್ಲ. ಟಿಕೇಟು ಪಡಕೊಂಡವರು ಎಂಟು ಮಂದಿ ಮಾತ್ರ. ಎಂಟು ಮಂದಿಗೋಸ್ಕರ ನಾಟಕವೇ? ಆದುದರಿಂದ ಎಲ್ಲರನ್ನೂ ಧರ್ಮಾರ್ಥ ಬಿಟ್ಟೆವು. ಐದೇ ನಿಮಿಷಗಳಲ್ಲಿ ಸ್ಥಳವೆಲ್ಲಾ ತುಂಬಿಹೋಯಿತು.

ನಾಟಕ ಸುರುವಾಗಲು ಐದು ನಿಮಿಷವಿದ್ದಿತು. ನಾನು ಯಾರು-ಯಾರು ಬಂದಿದ್ದಾರೆಂದು ಪರದೆಯ ಮಧ್ಯದ ಒಂದು ತೂತಿನಿಂದ

ಹೊರ ನೋಡಿದೆ. ಮಧ್ಯದಲ್ಲಿ ತಂದೆಯವರು ಕಾಣಿಸಿದರು. ದಿಗಿಲಾಯಿತು. ಹಿಂದಿರುಗುವಾಗ ಎಡವಿ ಬಿದ್ದೆ. ಕಾಗದದ ಫರದೆಯು ಹರಿಯಿತು. ಹಿಂದೆ ಇದ್ದ ರಂಗನು ಯಾರೊ ತುಂಟ ಹುಡುಗನು ಮೇಲೇರಿ ಪರದೆಯನ್ನು ಹರಿದನೆಂದು ನನಗೆರಡೇಟನ್ನು ಕೊಟ್ಟನು. ನಾನು ಸಿಟ್ಟಿನಿಂದ ಅವನಿಗೆ ಎರಡು ಕೆನ್ನೆಗೆ ಹೊಡೆದೆನು. ಆದರೆ ಎದುರಿನ ಪರದೆ ಇದ್ದುದರಿಂದ ಇದೆಲ್ಲಾ ಯಾರಿಗೂ ಕಾಣಲಿಲ್ಲ.

ಅಂತೂ ಇಂತೂ ನಮ್ಮ ನಾಟಕವು ಆರೂವರೆ ಗಂಟೆಗೆ ಸುರುವಾಯಿತು. ಸಾಕಷ್ಟು ಉಡಿಗೆತೊಡಿಗೆಗಳಿಲ್ಲದಿದ್ದುದರಿಂದ ಅವರವರ ಉಡಿಗೆತೊಡಿಗೆಗಳು ನಾಟಕದ ಉಡಿಗೆತೊಡಿಗೆಗಳಾದುವು. ಪಾತ್ರಧಾರಿ ರಾಮು ಅಬ್ಬರದಿಂದ ಕುರ್ಚಿಯಲ್ಲಿ ಕುಳಿತುಕೊಳ್ಳಲು ಹೋಗುವಾಗ ತುಂಟ ಕಿಟ್ಟು ಕುರ್ಚಿಯನ್ನು ಹಿಂದೆಳೆದನು. ಪಾಪ, ರಾಮುವು ಕೆಳಬಿದ್ದನು. ಕೂಡಲೆ ಕೂಗಲು ತೊಡಗಿದನು. ಪ್ರೇಕ್ಷಕರು ಅದು ನಿಜವಾದ ನಟನೆಯೆಂದೆ ನಂಬಿ ಅವನ ನಟನೆಗೆ ತಲೆದೂಗಿದರು. ಆದರೆ ಮತ್ತೆ ಅವನನ್ನು ವಿಚಾರಿಸಿದಾಗ ಅವನು ನೋವಿನಿಂದ ಕೂಗಿದುದೆಂದ! ಗ್ಯಾಸ್‌ಮಾಸ್ಕ್ ಕಾಗದದ್ದಾದುದರಿಂದ ಒಂದೆರಡು ನಿಮಿಷಗಳಲ್ಲಿ ಹರಿದು ಹೋಯಿತು. ನಾಟಕವೂ ಏಳು ಗಂಟೆಗೆ ಅಂತ್ಯವಾಯಿತು.

—ಕೆ. ಪದ್ಮನಾಭಾಚಾರ್,
(V ಫೋರ್ಮ್)

# ನಮ್ಮೂರ ನಿಂಗ

ನಿಂಗನು ನಮ್ಮೂರ ಬಿಟ್ಟೀ ಬಸವಯ್ಯ. ಯಾರೇ ಏನು ಕೆಲಸವನ್ನು ಹೇಳಿದರೂ ತತ್‌ಕ್ಷಣ ಮಾಡಿಬಿಡುತ್ತಿದ್ದ. ಬೈದರೆ ಸುಮ್ಮನೆ ಕೇಳಿ ಕೊಂಡು ನಿಲ್ಲುವನು. ಬೈಗಳ ಮಳೆ ನಿಂತ ಮೇಲೆ, "ಏನು, ಏಕೆ ನಿಲ್ಲಿಸಿದಿರಿ?" ಎಂದು ಕೇಳಿಬಿಡುತ್ತಿದ್ದ. ನಗು ಬರದಿದ್ದವರಿಗೆ ಬರ ಬೇಕು, ಆ ಸಮಯದಲ್ಲಿ!

ಹೇಳಿದ ಕೆಲಸವನ್ನೆಲ್ಲಾ ಮಾಡುತಿದ್ದಾಗ್ಯೂ ಒಂದು ದಿನಾನೂ, ಒಂದು ಪೈ ಇಸಕೊಂಡವನಲ್ಲ. ಕೊಟ್ಟರೆ ಕೈ ಚಾಚುತಿದ್ದ. ಇಲ್ಲದಿದ್ರೆ ಬಂದ ಹಾಗೆ ಹಿಂದಿರುಗುತಿದ್ದ. ಆದ್ರೂ ಖರ್ಚಿಗೆ ಅವನ ಕೈಯಲ್ಲಿ ಒಂದು ಎರಡಾಣೆಯಾದರೂ ತಪ್ಪುತಿದ್ದಿಲ್ಲ. "ನಿಂಗನ ಮನೇಲಿ ಒಂದು ಭೂತಾ ಅಯ್ತೆ. ಬಾರಿ ಭೂತಾ ಅದು. ಕೇಳಿದ್ದಂಗೆ ದುಡ್ಡು ಕೊಡ್ತಯ್ತೆ," ಎನ್ತಿದ್ರು ನಮ್ಮ ಹಳ್ಳಿಜನ. ಮೇಲ್ಮನೆ ಸುಬ್ಬಯ್ಯ ನೋರ ಪತ್ತು ಮುಡಿ ಭತ್ತ, ಹಿತ್ಲತೋಟ ಮಂಜಪ್ಪನೋರ ಐದು ಸೇರು ಉದ್ದು, ಎರಡು ಸೇರು ರಾಗಿ, ಬಾಗ್ಲಿಹಿಂದೆ ಚೆನ್ನಕ್ಕನೋರ ಏಳುವರೆ ಸೇರು ಹೆಸ್ರುಬೇಳೆ ಇವೆಲ್ಲಾ ನಿಂಗನಿಗೆ ದಾನ. "ಬೆಳಗ್ಗಿನಿಂದ ಸಂಜೆಯ ತನಕ ಒಂದು ನಿಮಿಷಾನೂ ಸುಮ್ಮನೆ ಕುಳಿತವನಲ್ಲ. ಕೆಲ್ಸ ಮಾಡೋದ್ರಲ್ಲಿ ಸಿಂಗನ್ನ ಬಿಟ್ರೆ ಇಲ್ಲ" ಎಂದು ಹೊಸೂರ ತಿಮ್ಮಣ್ಣ ಜೋಯಿಸ್ರೂ ಕೂಡ ತಮ್ಮ ಸರ್ಟಿಫಿಕೇಟನ್ನು ಕೊಟ್ಟಿದ್ರೆಂದರೆ!

ಕೆಲಸವನ್ನೇನೋ ಮಾಡ್ತಿದ್ದ ನಿಜ. ಆದ್ರೆ ಅವನಲ್ಲಿ ಒಂದು ಗುಣವಿತ್ತು. ಅದು ಸುಗುಣವೋ ದುರ್ಗುಣವೋ ನೀವೇ ಹೇಳಿ. ನಿಂಗನ ಮನಸ್ಸಿಗೆ ಅದೇನೋ ಒಳ್ಳೇದಾಗಿ ತೋರುತ್ತಿದ್ದರೂ ಬೇರೆ ಯವರಿಗೆ ಅದು ಕೆಟ್ಟದೆಂದೆನಿಸದೆ ಇರಲಿಲ್ಲ. ಅದೇನು ಮಹತ್ವದ್ದೂ ಅಲ್ಲ. ಯಾವ ಕೆಲಸವನ್ನೇ ಹೇಳಲಿ, ಅದ್ರಿಂದ ಸ್ವಲ್ಪ ಜಾಸ್ತಿ ಮಾಡು

ವುದು ಅವನ ಸ್ವಭಾವವಾಗಿತ್ತು. ಏನು ಮಾಡಿದ್ರೂ ಬಿಡುವ ಹಾಗಿಲ್ಲ ಅದು. "ಹುಟ್ಟುಗುಣ ಗಟ್ಟ ಹತ್ತಿದ್ರೂ ಬಿಡೋದಿಲ್ಲ" ಎಂತೇನೋ ಮಾತಿದೆಯಲ್ಲ, ಅದ್ರ್ಹಂಗೆ. ಕೆಲವೊಮ್ಮೆ ಉಪಕಾರವೇ ಆಗ್ತಿತ್ತು. ಒಮ್ಮೊಮ್ಮೆ ವಿಪರೀತವೂ ಆಗ್ತಿತ್ತು. ಹೀಗೆ ನಿಂಗನ ಅಧಿಕಪ್ರಸಂಗ ದಿಂದ ಈಗ ಲಿಂಗನಿಗೂ ನಿಂಗನಿಗೂ ಸ್ವಲ್ಪ ಹಾಗೆಹಾಗೆಯೇ, ಅಂದ್ರೆ ಮತ್ತೇನಿಲ್ಲ. ಅದು ಆದದ್ದು ಹೀಗೆ.

ನಿಂಗನು ತಾಯಿತಂದೆಗಳಿಲ್ಲದ ತಬ್ಬಲಿಯಾಗಿದ್ದ ತನ್ನ ಆರನೇ ವಯಸ್ಸಿನಲ್ಲೇ. ಆಗಲೇ ಆರಂಭವಾಗಿದೆ ಇವನಿಗೆ ಬಿಟ್ಟೀ ಬಸವಯ್ಯನ ಕೆಲಸ. ಅಂದಿನಿಂದ ಇಂದಿನ ವರೆಗೂ ನಿಂಗ ಊರವರ ಬದುಕು.

ಲಿಂಗನು ನಮ್ಮೂರಲ್ಲಿ ಧನಿಕ. ಐವತ್ತು ಮುಡಿ ಅಕ್ಕಿ ಬರುವ ಗದ್ದೆಗಳೂ ಇನ್ನೂರು ರೂಪಾಯಿ ಬರುವ ಹಿತ್ತಿಲು ಇದ್ದುದೇ ಅವನಿ ಗೊಂದು ಹೆಮ್ಮೆ. ತಿಂದು ಕೊಬ್ಬಿ ಬೆಳೆದ ದೇಹ. ಎದುರಿಗೆ ಬಂದ ನೆಂದರೆ ಆನೆಯು ಚಿತ್ರವು ಮನಸ್ಸಿನೆದುರಿಗೆ ಬರುವುದು. ಆ ಮುಖ ದಲ್ಲಿ ಆಟದ ಮೈರಾವಣನಿಗಿರುವಂತೆ ಸುರುಳಿಯಾದ ಮೀಸೆ. ಮೈ ಬಣ್ಣವು ಅಚ್ಚ ತೊಳೆದ ಕೆಂಡದಂತಾದುದರಿಂದ ಆ ಮುಖದಿಂದ ಮೀಸೆಯನ್ನು ಹುಡುಕಿ ತೆಗೆಯುವುದು ಬಹು ಕಷ್ಟ. ಅಮಾವಾಸ್ಯೆ ರಾತ್ರಿ ಎದುರಿಗೆ ಬಂದನೆಂದರೆ ಥಿಕ್ಕಿ ಹೊಡೆಯುವುದೇ ನಿಜ.

ಹುಣ್ಣಿಮೆ ದಿನ ಒಮ್ಮೆ ನಮ್ಮಯ್ನೋರು ಗುಡ್ಡದತ್ತ ಹೋಗ್ತಿ ದ್ರಂತೆ. ಎದ್ರಿಗೆ ನಮ್ಮ ಆಸಾಮಿ ಸಿಕ್ಕಿಬಿಟ್ಟ. ಅಯ್ನೋರು ಬಹಳ ಅವ ಸರದಿಂದ ಹೋಗ್ತಿದ್ರು. ಬಂದದ್ನು ನೋಡ್ಲೇ ಇಲ್ಲವಂತೆ.

"ನಮುಸ್ಕಾರ, ಅಯ್ನೋರೇ!"

"ಆಂ, ಯಾರದು?"—ನೋಡೋದೇನು! ಕಾಲ್ಕಿತ್ಕೊಂಡು ಓಡಿ ದ್ರಯ್ಯ ಒಂದೋಟ. ಜೀವದ ಮೇಲಿನ ಆಶೆಯು ಓಟವದು. ಬಂದು ಬಿದ್ದವ್ರಿಗೆ ಮರುದಿನ್ವೇ ಎಚ್ಚರಿಕೆ. ನಾಲ್ಕು ದಿನ ಕೆಂಡದಂತಹ ಜ್ವರ. ಮತ್ತೆ ಹ್ಯಾಂಗಾದ್ರೂ ಅದು ಗುಣ ಅಯ್ತುನ್ನಿ.

"ಏನಾದ್ರಾಯ್ತ್ರೇ" ತಿಮ್ಮಪ್ಪ ಜೋಯಿಸರ ಪ್ರಶ್ನೆ.

"ಹುಣ್ಣಿಮೆ ದಿನ ಗುಡ್ಡದತ್ತ ಹೋಗಿದ್ದೆ. ಏನೋ ಎದುರಿಗೆ ಬಂತು. ಅದೇ ಕಪ್ಪು ಭೂತ. ಮತ್ತೇನೋ ನನಗೇನೂ ಗೊತ್ತಿಲ್ಲ."

ನಮ್ಮ ಅಯ್ನೋರು ಲಿಂಗನ್ನ ಬ್ರಹ್ಮರಾಕ್ಷಸ ಎಂತ ನೆನ್ನಿ ಓಡಿದ್ದೆ ಓಟ. ಹೆದರಿದ್ದೇ ಜ್ವರ.

ಲಿಂಗನ ದೇಹ ಆಜಾನುಬಾಹುವಾದ್ದು. ಪಾಪದ ಹಾರುವ ನೊಬ್ಬನು ಎದುರಿಗೆ ನಿಂತಾಗ ಕೈಬೀಸಿದರೆ ಆ ಹಾರುವನ ಮೂಳೆಯೂ ಸಿಗಲಿಕ್ಕಿಲ್ಲ. ಅಂತಹ ಕಲಿಕಾಲದ ಭೀಮ.

"ಅಯ್ನೋರ ಹೊಟೇಲ್ಗೆ ಹೋಗಿ ನಾವು ಕುಡೀಬೇಕೆನ್ರೀರಾ ಕಾಫಿ? ಏಕೆ ನಮ್ನೋರ ಹೊಟೇಲ್ಗೆ ಅಯ್ನೋರು ಬರ್ತಾರಾ?" ಎಂದು ಕೇಳಿದ ವನಿವ.

ಊರಿನವರೆಲ್ಲಾ ಅವನೆದುರು ನಾಯಿಗಳಂತೆ ತೆಪ್ಪಗಿರುತಿದ್ರು. "ನನ್ನೆದ್ರು ನಿಂತವ್ರಿಗೆ ಕೋರ್ಟಿನಲ್ಲಿ ರಿಕಾರೋಟು ಮಾಡಿಸ್ತೀನಿ," ಎಂದು ಹೆದರಿಸುತ್ತಿದ್ದ. ದುಡ್ಡಿನ ಗಣ್ಯವೇ ಇಲ್ಲದಿದ್ರೂ ಒಂದು ಪೈ ಯನ್ನೂ ಹಾಳು ಮಾಡುವವನಲ್ಲ. ಬೇಡುವವರು ಬಂದರೆ ಒಂದು ದಿನಾನೂ ನಾಯಿ 'ಥೂ'ಬಿಡದೆ ಇದ್ದವನಲ್ಲ. ಅಂತಹ ದಾನಶೂರ.

ಲಿಂಗನಿಂದ ಮನೆಮಂದಿಗಳಿಗೆಲ್ಲಾ ಒಂದು ಉಪಕಾರವಿತ್ತು. ತಮ್ಮ ಕೆಲಸ ಮಾಡಲು ಬಿಡದೆ ಒಂದೇ ಸವನೆ ಅಳುತ್ತಿರುವ ಮಕ್ಕ ಳಿಗೆ, "ಲಿಂಗನ್ಗೆ ಕೊಡ್ತೇನೆ ನಿನ್ನ!" ಎಂದ್ರೆ ಮಕ್ಕಳು ತತ್‌ಕ್ಷಣ ಮೆತ್ತಗಾ ಗುತಿದ್ದವು.

ಲಿಂಗನಾದರೋ ಯಾವಾಗಲೂ ಲಾಭದ ದಾರಿಯನ್ನೇ ಆಲೋ ಚಿಸುತಿದ್ದನು. ಆಲೋಚಿಸುತಿದ್ದಂತೆ ಒಮ್ಮೆ ನಿಂಗನ ಚಿತ್ರವು ಅವನ ದೃಷ್ಟಿಪಥಕ್ಕೆ ಗೋಚರಿಸಿತು. ಬಿಟ್ಟೇ ಬಸವಯ್ಯನನ್ನು ಹ್ಯಾಗಾದರೂ ತನ್ನ ಬಲೆಯೊಳಗೆ ಹಾಕಿಕೊಂಡು ಬಿಡೋಣವೇ ಎಂಬಾಲೋಚನೆ. ಆದರೆ ಅದು ಸಾಧ್ಯವೇ ಎಂಬುದೊಂದು ಸಂಶಯ. ಊರವರ ಬದು

ಕನ್ನು ತಾನು ಸೆಳಕೊಂಡರೆ ಊರವರೆಲ್ಲಾ ಅವನೆದ್ರು ನಿಂತರೆ? ಎಂಬ ಭಯ.

ಲಿಂಗ ನಮ್ಮೂರಿನ ಹೊಟೇಲಿನ(ಗಡಂಗಿನ) ಮ್ಹಾಲಿಕ. ದಿನಾಲೂ ಪೇಟೆಗೆ ಹೆಂಡವನ್ನು ಕಳುಹಿಸುತ್ತಿದ್ದ. ಇವನಿಗಂತೂ "ಮುಂಡ"ದಲ್ಲಿ ಎಷ್ಟು ಹೊತ್ತಿಗೂ ಕುಳಿತಿರಬೇಕು. ಹೀಗಿದ್ದುದರಿಂದ, ಲಿಂಗ ಒಂದು ಜನವನ್ನು ಕೆಲಸಕ್ಕಿಟ್ಟುಕೊಂಡಿದ್ದ; ಆ ಹೆಂಡವನ್ನ ಕಳುಹಿಸಲಿಕ್ಕೆ ನಿಂಗನನ್ನು ಬಲೆಯೊಳಗೆ ಹಾಕಿಕೊಂಡರೆ ಆದಾಯವಾಗುತ್ತಲ್ಲ, ಆ ಜನಕ್ಕೆ ಕೊಡೋಬೇಕಾಗಿರೋ ಸಂಬಳ:— ಎಂದು ಲಿಂಗನ ಆಲೋಚನೆ.

ಮರುದಿನ ನಿಂಗ ಎಂದಿನಂತೆ ಕೆಲಸವನ್ನೆಲ್ಲಾ ಮುಗಿಸಿಕೊಂಡು ಅಭ್ಯಾಸದಂತೆ ಲಿಂಗನ "ಹೊಟೇಲ್ಗೆ" "ಕಾಫಿ" ಕುಡಿಯಲಿಕ್ಕೆ ಬಂದನು. ಲಿಂಗ ಅವನನ್ನು ಒತ್ತಟ್ಟಿಗೆ ಕರೆದ. "ನಿಂಗಾ!" ಎಂದ.

"ಏನು ಬುದ್ಧಿ?" ಎಂದ ನಿಂಗ.

"ಇನ್ನೇನಿಲ್ಲ. ನಾನು ಹೇಳಿದ ಒಂದು ಮಾತನ್ನು ನಡಿಸ್ತೀಯಾ?" ಲಿಂಗನೆಂದ.

"ಅದೇನು ಹಾಂಗೆ ಹೇಳ್ತೀರಿ ಬುದ್ಧಿ?" ನಿಂಗನ ಪ್ರಶ್ನೆ.

"ಅಲ್ಲ, ಅದ್ರಿಂದ ನನ್ಗೂ ಲಾಭ ಆಯ್ತು. ನಿಂಗೂ ಲಾಭ ಆಯ್ತು," ಮೆಲ್ಲನೆ ಉತ್ತರವಿತ್ತ, ಲಿಂಗ.

"ಅದೇನು, ಬುದ್ಧಿ? ನನ್ನಿಂದಾದ್ರೆ ನಡಿಸ್ತೇನಿ."

ಲಿಂಗನೆಂದ, "ಅಲ್ಲ ಕಣೋ, ಈಗ ನಾನು ದಿನಾಗ್ಲೂ ಹೆಂಡನ ಪೇಟೆಗೆ ಕಳುಹಿಸುತ್ತೇನೋ, ಇಲ್ವೋ?"

"ಹೌದು ಬುದ್ಧೀ!" ನಿಂಗನೆಂದ.

"ನಾಳೆಯಿಂದ ನೀನು ಆ ಹೆಂಡನ್ನ ತಗೊಂಡು ಹೋಗಿ ಕೊಟ್ಟು ಬರುವ ಕೆಲಸ ಮಾಡ್ತೀಯಾ? ನಿನ್ಗೂ ಒಂದು ಕೆಲಸಾಂತ ಆಯ್ತು.

"ಅಷ್ಟೇನೇ, ಬುದ್ಧೀ?"

"ಹೌದು. ಆದ್ರೆ..........."

"'ಆದ್ರೆ' ಎಂದ್ರೆ?"

"ಆದ್ರೆ...........ಊರವರೆಲ್ಲಾ ಏನ್ಮಾಡ್ತಾರೋಂತ."

"ಇಲ್ಲ, ಬಿಡಿ. ಅದ್ಕೆಲ್ಲಾ ನಾನಿದ್ದೇನ್ರೀ!"

"ಬಿಡು ಹಾಂಗಾದ್ರೆ, ಮತ್ತೂ ಇನ್ನೊಂದು ಇದೆ."

"ಅದೇನ್ರೀ?"

"ನಿನ್ಗೆ ಸಂಬಳ ಎಷ್ಟು ಕೊಡ್ಬೇಕೂಂತ. ನಾಲ್ಕು ರೂಪಾಯಿ ಸಾಲದೇ?"

"ನಿಮ್ಮಂತೋರು ಎಷ್ಟು ಕೊಟ್ರೂ ಸರಿಯೇ ಬುದ್ಧಿ, ಅದಕ್ಕೆಲ್ಲಾ ತಮ್ಮನ್ನು."

* * * * *

"ಏ ಸೋಮೂ, ನಿಂಗನ್ಗೆ ಒಂದು ಸಿಂಗಲ್ ತಂದ್ಕೊಡೋ." ಲಿಂಗನ ಆಜ್ಞೆ. ನಮ್ಮ ಲಿಂಗನ ಸಂತೋಷಕ್ಕೆ ಪಾರವೇ ಇಲ್ಲ. ಮೊದಲಿನವನಿಗೆ ಹತ್ತು ರೂಪಾಯಿಗಳನ್ನು ಕೊಡುತ್ತಿದ್ದಲ್ಲಿ ಪಾಪದ ನಿಂಗನಿಗೆ ನಾಲ್ಕೇ ರೂಪಾಯಿ! ತಿಂಗಳಿಗೆ ಆರು ರೂಪಾಯಿ ಉಳಿತಾಯ! ವರ್ಷಕ್ಕೆ ಎಪ್ಪತ್ತೆರಡು. ಐದು ವರ್ಷಗಳಿಗೆ 360 ರೂಪಾಯಿ! ಹೀಗೆ ಎಣಿಸುತ್ತಾ ಇರುವ ಭರದಲ್ಲಿ ಅವನಿಗೆ ತನ್ನ ಅರಿವೇ ಇಲ್ಲದಂತಾಯಿತು.

ಅಂದಿನಿಂದ ನಿಂಗನು ಲಿಂಗನ ಬಂಟ. ಬಹಳ ದಿನಗಳಾದರೂ ನಮ್ಮತ್ತ ಸುಳಿಯದಿದ್ದುದರಿಂದ ವಿಚಾರಿಸಿದೆ. ಲಿಂಗನ ಬಂಟನೆಂದು ತಿಳಿದು, "ಅಲ್ಲಾದರೂ ಹಾಯಾಗಿರಲಿ!" ಎಂದಾಲೋಚಿಸಿ ಸುಮ್ಮನಾದೆ.

ದಿನಾಲೂ ನಿಂಗನು ಬೆಳಿಗ್ಗೆ ಹೆಂಡದ ಮಡಕೆಗಳನ್ನು (ಬರೇ ಮಡಕೆಗಳನ್ನು ಮಾತ್ರವೇ ಅಲ್ಲ, ಹೆಂಡ ತುಂಬಿದ ಮಡಕೆಗಳನ್ನು)

ಹೊತ್ತುಕೊಂಡು ಪೇಟೆಗೆ ಹೋಗುತಿದ್ದ. ಸಂಜೆಗೆ ಹಣವನ್ನು ತಂದು ಲಿಂಗನಿಗೊಪ್ಪಿಸುತಿದ್ದ.

ಅಂದಿನಿಂದ ನಿಂಗನಿಗೆ ಅಲ್ಲೇ "ಕಾಫಿ." ಒಮ್ಮೊಮ್ಮೆ ಮೂಗಿನ ವರೆಗೂ ಕುಡಿಯುತಿದ್ದ. ಅಮಲಿನ ಭರದಲ್ಲಿ ನರ್ತನ ಮಾಡುತಿದ್ದ. ಇವನ ನರ್ತನವನ್ನು ನೋಡಲೆಂದೇ ಹಲವು ಜನರು ಬರುತಿದ್ದರು. ಹೀಗಾಗಿ ಲಿಂಗನ ವ್ಯಾಪಾರವು ಹೆಚ್ಚಿತು.

ಒಂದು ದಿನ ಎಂದಿನಂತೆ ನಿಂಗ ಹೆಂಡವನ್ನು ಹೊತ್ತುಕೊಂಡು ಹೋಗುತಿದ್ದ. ಅಷ್ಟರಲ್ಲಿ ನಮ್ಮೂರ ತಿಮ್ಮಪ್ಪ ಜೋಯಿಸರ ಹೆಂಡತಿ ತಿಮ್ಮಕ್ಕ, ದಾರಿಯಲ್ಲಿ ಹೋಗುತಿದ್ದ ನಿಂಗನನ್ನು ನೋಡಿ, "ನಿಂಗಾ!" ಎಂದರು.

"ಮೊನ್ನೆ ನಾನು ಎರಡೆಮ್ಮೆ ತಗೊಂಡಿದ್ದೀನಿ, ಗೊತ್ತದೆ ಅಲ್ವೇ. ಈಗ ಪೇಟೆಯತ್ಕಡೆ ಒಳ್ಳೇ ಗಿರಾಕಿಗಳಿದ್ದಾರಂತಲ್ಲವೇ? ನಾನು ಕೊಡೋ ಎರಡು ಕುತ್ತಿ ಹಾಲನ್ನು ಮಾರಿ ಬಿಡು. ಆದೀತೇನೋ?"

"ಆದೀತಮ್ಮಾ," ಎಂದ ನಿಂಗ.

"ಇಷ್ಟೇ ಹೊತ್ತಿಗೆ ಯಾವಾಗ್ಲೂ ರಡೀ ಮಾಡಿಡ್ತೇನೆ," ತಿಮ್ಮಕ್ಕ ನೆಂದರು. ನಮ್ಮ ತಿಮ್ಮಕ್ಕನಿಗೆ ಸ್ವಲ್ಪ ಸ್ವಲ್ಪ ಇಂಗ್ಲಿಷೂ ಗೊತ್ತಿತ್ತು. ನಾಲ್ಕನೆಯ ಈಯತ್ತೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ದ್ದರು, ಅವರು.

ನಿಂಗ ಹಾಲಿನ ಪಾತ್ರವನ್ನು ಬುಟ್ಟಿಯಲ್ಲಿಟ್ಟುಕೊಂಡು ಪೇಟೆಗೆ ನಡೆದನು.

"ಯಾರದು, ನಿಂಗನೋ?" ಸೀತಮ್ಮ ಕೇಳಿದರು. "ಏನು, ಇತ್ತ ಲಾಗಿ ಹಣಿಕಿ ಸಹ ನೋಡೋದಿಲ್ಲ. ಅಷ್ಟು ಬೇಗ ಗುರುತೂ ಮರೆತು ಹೋಯ್ತೆ?"

"ಇಲ್ಲಮ್ಮ, ಕೆಲಸದ ಗಡಿಬಿಡಿ. ಪುರಸತ್ತು ಕಮ್ಮಿ. ಮಾಫಿ ಮಾಡಿ."

"ಹೋಗಲಿ ಬಿಡು. ಗಂಗೆಯನ್ನು ಹುಡುಕ್ಕೊಂಡು ಹೋಗು ವಾಗ್ಗೆ ಅವಳೇ ಎದ್ರು ಬಂದ ಹಾಗಾಯ್ತು!"

"ಅದೇನಮ್ಮಾ?"

"ಅಲ್ವೋ, ಮನೇಲಿ ಮಜ್ಜಿಗೆ ಯಾವಾಗಲೂ ಉಳಿಯುತ್ತೆ. ಅದನ್ನು ನೀನು ಪೇಟೇಲಿ ಮಾರಿ ಬರ್‍ತೀಯಾ?"

"ಅದಕ್ಕೇನಮ್ಮಾ," ಎಂದು ನಿಂಗನು ಆ ತಂಬಿಗೆಯನ್ನೂ ಕುಕ್ಕೇ ಲಿಟ್ಟು ನೇರವಾಗಿ ನಡೆದನು.

ಒಮ್ಮೆ ಹೀಗೆಯೇ ಹೊತ್ತುಕೊಂಡು ಹೋಗುತ್ತಿದ್ದ ನಿಂಗನಿ ಗೊಂದಾಲೋಚನೆ ಹೊಳೆಯಿತು: "ನಾನು ಈ ಹಾಲುಮಜ್ಜಿಗೆಗಳೆರ ಡನ್ನೂ ಹೆಂಡದ ಪಾತ್ರೆಗಳಿಗೆ ಸುರಿದು ಹಾಲು ಮಜ್ಜಿಗೆಗಳ ಪಾತ್ರೆ ಗಳನ್ನು ಇಲ್ಲೇ ಒಂದಂಗಡಿಯಲ್ಲಿಟ್ಟು ಹೋಗಬಾರದೇಕೆ?" ಪಾಪ, ಅವನ ದಪ್ಪ ತಲೆಗೆ, ಹೆಂಡಕ್ಕೆ ಮಜ್ಜಿಗೆಯನ್ನು ಸುರಿದರೆ ನಿಷ್ಪ್ರಯೋ ಜನವಾಗುವುದೆಂಬ ಆಲೋಚನೆಯೇ ಹೊಳೆಯಲಿಲ್ಲವೇನೋ.

ಆಲೋಚನೆಯು ಹೊಳೆದುದೇ ತಡ. ನಿಂಗನು ಅದರಂತೆ ಮಾಡಲು ತಡ ಮಾಡಲಿಲ್ಲ. ಕುಕ್ಕೆಯನ್ನು ಕೆಳಗಿಟ್ಟು ಹಾಲುಮಜ್ಜಿಗೆ ಗಳೆರಡನ್ನೂ ಹೆಂಡದ ಗಡಿಗೆಗಳಿಗೆ ಸುರಿದು, ಪಾತ್ರೆಗಳೆರಡನ್ನೂ ಅಲ್ಲೇ ಪೇದ್ರುವಿನ ಅಂಗಡಿಯಲ್ಲಿಟ್ಟು, ಪೇಟೆಗೆ ನಡೆದೇ ಬಿಟ್ಟ.

ಮರುದಿನದಿಂದ ಲಿಂಗನಿಗೆ ಪೇಟೆಯ ಗಡಂಗಿನ ಗುತ್ತೇದಾರನ ಸುರಿಮಳೆ. ಹೆಂಡದಲ್ಲಿ ಸ್ವಲ್ಪವೂ ರುಚಿಯಿರಲಿಲ್ಲ. ಹಾಲು ಮಜ್ಜಿಗೆ ಗಳೆರಡೂ ಬೆರಸಿರುವುದೆಂದು ಗುತ್ತೇದಾರನಿಗೇನು ಗೊತ್ತು?

ಗಿರಾಕಿಗಳು ಗುತ್ತೇದಾರನನ್ನೂ ಗುತ್ತೇದಾರನು ಲಿಂಗನನ್ನೂ ಬೈಯುವುದೇ ಆಗಿಹೋಯಿತು. ಗುತ್ತೇದಾರನಾದರೋ ನಮ್ಮೂರಿಗೆ ಬಂದು ಲಿಂಗನನ್ನು ಕಂಡು ದೊಡ್ಡದೊಂದು ಸಹಸ್ರನಾಮವನ್ನೇ ಮಾಡಿದನು. ಲಿಂಗನು ಮಾತೆತ್ತಲಿಲ್ಲ. ನಿರಪರಾಧಿಯಾಗಿದ್ದರೂ ಪೇಟೆಯ ಗುತ್ತೇದಾರನೊಡನೆ ಏನು ಮಾಡಿಯಾನು ?

ನಿಂಗನನ್ನು ಕರೆದು ಸಂಗತಿಯನ್ನು ವಿಚಾರಿಸಿದನು. ವಿಷಯವು ತಿಳಿದ ಮೇಲೆ ಬಂದ ಕೋಪವೋ!—ಅದು ಬಣ್ಣಿಸಲಸಾಧ್ಯ.

ತನ್ನ ಗಾಳಿಗೋಪುರವು ಕುಸಿದುಬಿದ್ದುದಕ್ಕೆ ವ್ಯಥೆಯೊಂದೆಡೆ, ಊರವರ ಎದುರಿಗೆ ತನ್ನ ಅಪಮಾನವಾದುದಕ್ಕೆ ದುಃಖ ಇನ್ನೊಂದೆಡೆ; ಅಪಮಾನಗೊಳಿಸುವಂತೆ ಮಾಡಿದುದಕ್ಕೆ ನಿಂಗನ ಮೇಲೆ ಕೋಪ ಮಗುದೊಂದೆಡೆಯಲ್ಲಿ—ಆದರೂ ಏನು ಮಾಡಿಯಾನು ಪಾಪದ ಲಿಂಗ?

ಅಂದಿನಿಂದ ಲಿಂಗನು ಬಹುಮಟ್ಟಿಗೆ ಸಭ್ಯನಾಗಿದ್ದಾನೆ. ನಿಂಗನೂ ಕೂಡ ತನ್ನ ಅಧಿಕಪ್ರಸಂಗವನ್ನು ಕಡಿಮೆ ಮಾಡಿದ್ದಾನೆ.

**ಕೆ. ನಾಗೇಶ ತಂತ್ರಿ,**
(VI ಫೋರ್ಮ್)

# ನಮ್ಮೂರ ಯಕ್ಷಗಾನ ಸಭೆ

ನಮ್ಮೂರು ಎಲ್ಲಾ ಊರುಗಳಂತಲ್ಲ. ಸಿಲೋನಿನಂತಹ ದ್ವೀಪದಂತಲ್ಲ. ದಖ್ಖಣದಂತಹ ಪೀಠಭೂಮಿಯಂತಲ್ಲ. ಅದು ಒಂದು ಇಟಲಿಯಂತಹ ಪರ್ಯಾಯದ್ವೀಪವಾಗಿ ನೀಡಿದೆ ಎನ್ನಬಹುದು. ಪಶ್ಚಿಮದಲ್ಲಿ ನಮ್ಮೂರ ಮಹಾಸಾಗರವೇ ಆದ ಅರಬ್ಬಿಸಮುದ್ರವೂ, ದಕ್ಷಿಣದಲ್ಲಿ ನಮ್ಮೂರ ಸಮುದ್ರವೇ ಆದ ನೇತ್ರಾವತಿ ನದಿಯೂ, ಪೂರ್ವದಲ್ಲಿ ನಮ್ಮೂರ ಮಹಾನದಿಯೇ ಆದ ಆ ನೇತ್ರಾವತಿಯ ಒಂದು ತೊರೆಯೂ ಆವರಿಸಿ, ಉತ್ತರದಲ್ಲಿ ವಿಶಾಲವಾದ ಬಯಲನ್ನು ಉಂಟು ಮಾಡಿದೆ, ನಮ್ಮ ಊರು.

ನಮ್ಮೂರ ಪ್ರಾಕೃತಿಕ ಲಕ್ಷಣಗಳನ್ನೂ ಆದರ ಪ್ರಕೃತಿಸೌಂದರ್ಯವನ್ನೂ ಕಾಣಹೋದರೆ, ಅಲ್ಲಿರುವುದು ಮದ್ರಾಸ್ ಕರಾವಳಿಯಂತಹ ಮನೋರಂಜಕವಾದ ಕರಾವಳಿಯೊಂದೇ ಅಲ್ಲ; ಗಂಗಾನದಿಯ ಬಯಲಿನಂತಹ ಫಲವತ್ತಾದ ಪ್ರದೇಶವೇ ಮಾತ್ರವಲ್ಲ; ಅಥವಾ ಕಾಶ್ಮೀರದಂತಹ ಸೃಷ್ಟಿಸೌಂದರ್ಯಗಳಿಂದ ಕೂಡಿದ ವಾತಾವರಣವೇ ಮಾತ್ರವಲ್ಲ. ಅಲ್ಲಿ ಕಾಣುತ್ತಿರುವ ಉಷ್ಣವಲಯದ ಅರಣ್ಯಗಳೇನು! ಗುಡ್ಡದ ಮೇಲಿನ ಮಲೆನಾಡಿನ ದೃಶ್ಯಗಳೇನು! (ಅಂದರೆ ಮೊದಲನೆಯದಾಗಿ ಸಮುದ್ರಕರಾವಳಿಯ ಹೊಯಿಗೆ ದಿನ್ನೆಗಳೇನು? ಅವುಗಳ ಮೇಲೆ ನಿಂತರೆ ಕಾಣುವ ವಿಶಾಲವಾದ ಜಲಭಾಗದಲ್ಲಿ ಅಸ್ತಮಿಸುತ್ತಿರುವ ಸೂರ್ಯನ ನಾಟಕವೇನು! ಅದರಲ್ಲೇ ಉನ್ನತವಾಗಿ ಬೆಳೆದು ನಾವಿಕರನ್ನು ಸ್ವಾಗತೀಕರಿಸುತ್ತಿರುವವೋ ಎಂಬಂತೆ ತೋರುತ್ತಿರುವ ಚಬುಕಿನ ಮರದ ಸೋಗೆಗಳೇನು! ಅಲ್ಲಲ್ಲಿ ಚಿಕ್ಕಚಿಕ್ಕ ಬೆಸ್ತರ ಗುಡಿಸಲುಗಳೇನು! ಅದಕ್ಕೆ ತಾಗಿರುವ ಬಂಜರುಪ್ರದೇಶಗಳೇನು!) ಅಂತೂ ನಮ್ಮೂರು ಸೃಷ್ಟಿಸೌಂದರ್ಯಗಳಿಂದ ತುಂಬಿ ತುಳುಕುತ್ತಿರುವ

ಒಂದು ಊರು. ಎಲ್ಲಾ ರೀತಿಯ ಪ್ರದೇಶಗಳು ಮಿಶ್ರಿತವಾಗಿರುವ ಊರು. ಅದನ್ನು ಯಾವಾತನೂ ವರ್ಣಿಸಿ ಪೂರೈಸಲಾರನು. ಅಂದ ಮೇಲೆ ನಮ್ಮೂರು ಎಲ್ಲಾ ರೀತಿಯ ಪ್ರಾಕೃತಿಕ ಲಕ್ಷಣಗಳು ತುಂಬಿದಂತಹ ಒಂದು ವಿಶಿಷ್ಟನಗರವೆಂದರೆ ಅತಿಶಯೋಕ್ತಿಯಾಗಲಾರದು.

ನಮ್ಮೂರ ಜನರೋ, ಪಟ್ಟಣದ ಜನರಂತೆ ನವನಾಗರಿಕರಲ್ಲ. ಹಳ್ಳಿನಾಡಿನವರಂತೆ ಕುರುಬರೂ ಅಲ್ಲ. ಸನಾತನಿಗಳೂ, ಸುಧಾರಕರೂ,—ಪೌರಾಣಿಕರೂ ಸಾಮಾಜಿಕರೂ,—ಧನಿಕರೂ ಬಡವರೂ,-ಬ್ರಾಹ್ಮಣರೂ ಹೊಲೆಯರೂ,—ನಾನಾ ವಿಧ. ಆದರೆ ನಮ್ಮೂರವರು ಯಾವ ರೀತಿನೀತಿಯುವರಾದರೂ, ಅವರಲ್ಲಿ ಒಂದು ರೀತಿಯ ಸಂಘ, ಒಕ್ಕಟ್ಟು ಉಂಟಾಗಿದೆ. ಅದಕ್ಕೆ ಮೂಲಕಾರಣವೇ ಯಕ್ಷಗಾನ ಸಭೆ. ಅದು ನಮ್ಮೂರ ದೈವ; ನಮ್ಮೂರವರ 'ಥಿಯೊಸೊಫಿಸ್ಟ್' ಕೂಟವೆಂದರೂ ಅತಿಶಯೋಕ್ತಿಯಾಗಲಾರದು. ಅದನ್ನು ಸುವ್ಯವಸ್ಥೆಯಲ್ಲಿ ನಡೆಯಿಸಲಿಕ್ಕಾಗಿ ಸಂಘವೇನು? ಕಟ್ಟುಕಟ್ಟಳೆಗಳೇನು? ಅದಕ್ಕೆ ಊರಿನ ಪ್ರತಿಯೊಬ್ಬನೂ ಒಳಗಾಗಬೇಕು. ನಮ್ಮೂರವರಾದರೂ ಅಂತೆಯೇ ಅದಕ್ಕೆ ಸದಸ್ಯರಾಗಿಯೇ ಆಗಿದ್ದಾರೆ, ಇಲ್ಲದಿದ್ದರೆ ಅವರಿಗೆ ನಮ್ಮೂರಲ್ಲಿ ಸ್ಥಾನವೇ ಇರಲಿಲ್ಲ. ಯಕ್ಷಗಾನ ಸಭೆಗಳಾದರೂ ಅಂತೆಯೇ, ತಿಂಗಳಿಗೊಂದರಂತಲ್ಲ, ವಾರಕ್ಕೊಂದರಂತಲ್ಲ, ಎರಡರಂತಲ್ಲ, ದಿನಕ್ಕೊಂದರಂತೆ. ರಜಾದಿನಗಳಲ್ಲಂತೂ ಎರಡೆರಡು; ಹಾಗೂ ನಮ್ಮ ಯಕ್ಷಗಾನ ಸಭೆಗಳು ತಿಂಗಳಿಗೆ ಮೂವತ್ತೈದಕ್ಕೆ ಕಮ್ಮಿಯಾಗದೆ ಆಗುತಿದ್ದವು. ಭಾಗವತರು, ಮೃದಂಗ ಬಾರಿಸುವವರು, ಅರ್ಥಧಾರಿಗಳು, ಇವರನ್ನು ವರ್ಣಿಸುವ ಚೈತನ್ಯ ನನ್ನಲ್ಲಿಲ್ಲ; ಅಗತ್ಯವೂ ಇಲ್ಲ. ಅವರು ಈಗಾಗಲೇ ಪಡೆದ ಆ 'ಕೋಕಿಲಗಾನ' 'ಮೃದಂಗಭೂಷಣ' 'ಯಕ್ಷಗಾನರತ್ನ' 'ಯಕ್ಷಗಾನ ವಿದ್ವಾನ್' 'ಶಿರೋಮಣಿ' ಮೊದಲಾದ ಬಿರುದುಗಳೇ ಅವರನ್ನು ವರ್ಣಿಸಿ ಹೇಳುವವು. ಆದುದರಿಂದಲೇ ಯಕ್ಷಗಾನವು ನಮ್ಮೂರ ಜೀವವೂ ಸರ್ವಸ್ವವೂ ಆಗಿದ್ದುದರಲ್ಲಿ ತಪ್ಪೇನು? ಇಂತಹುದೇ ನಮ್ಮೂರ ಒಂದು ಸಂಸ್ಥೆ. ಇದಕ್ಕೆ ಕಾರಣರೇ, ಮುಖ್ಯರೇ, ಶ್ರೀಮಾನ್ ವೆಂಕಪ್ಪಯ್ಯನವರು.

ಶ್ರೀಮಾನ್ ವೆಂಕಪ್ಪಯ್ಯನವರು ನಮ್ಮೂರ ಸಾಮಾನ್ಯ ಶ್ರೀಮಂತ ವರ್ಗಕ್ಕೆ ಸೇರಿದವರು. ಬ್ರಾಹ್ಮಣಕುಲದವರೂ ವೈದಿಕವೃತ್ತಿಯವರೂ ಆಗಿದ್ದರು. ಮನೆಯಾದರೂ ನಮ್ಮೂರ ವ್ಯಾಪಾರಕೇಂದ್ರದಿಂದ ಒಂದು ಮೈಲು ದೂರದ ಮಲೆನಾಡಿನಂತಿರುವ ಗುಡ್ಡದಲ್ಲಿ. ಅವರಾದರೋ, ಗಂಡಹೆಂಡರಿಬ್ಬರೇ. ಈಗಲಾದರೋ, ಅವರ ಶ್ರೀಮಂತಿಕೆ ಏನೂ ಉಳಿದಿರಲಿಲ್ಲ. ಸರ್ವವನ್ನೂ ಯಕ್ಷಗಾನ ಸಭೆಯ ಉದ್ಧಾರಕ್ಕಾಗಿ ತಿಲಾಂಜಲಿಯಿತ್ತಿದ್ದರು. ತನ್ನ ವೈದಿಕವೃತ್ತಿಯನ್ನು ಬಿಟ್ಟುಕೊಟ್ಟು ಯಕ್ಷಗಾನವೃತ್ತಿಯನ್ನೇ ಅನುಸರಿಸಿದ್ದರು. ಅದರ ಉದ್ಧಾರಕ್ಕಾಗಿ ಹಗಲು ರಾತ್ರಿಯೆನ್ನದೆ ದುಡಿಯುತ್ತಿದ್ದರು. ಕೆಲವೊಮ್ಮೆ ಯಕ್ಷಗಾನ ಅರ್ಥಕ್ಕಾಗಿ ಪರವೂರಿಗೆ ಹೋದುದರಿಂದ ದೊರೆತ ಅಲ್ಪಸ್ವಲ್ಪ ಹಣದಿಂದ ಸಂಸಾರವನ್ನು ನಾಗಿಸುತ್ತಿದ್ದರು. ಅವರಾದರೂ ಏಕಚಿತ್ತರೂ ಕಾರ್ಯಜಾಣರೂ ಆಗಿದ್ದರು. ಕಾರ್ಯಜಾಣರಾಗಿ ಅವರು ಯಕ್ಷಗಾನ ಸಂಘದ ಆಡಳಿತೆಯನ್ನು ಸುಸೂತ್ರವಾಗಿ ನಡೆಸುತ್ತಿದ್ದರು; ಮಾತ್ರವಲ್ಲ, ಅದರಲ್ಲಿದ್ದ ಪ್ರತಿಯೊಬ್ಬನೂ ಅವರ ಮಾತಿಗೆ ಒಳಗಾಗಿಯೇ ನಡೆಯಬೇಕಿತ್ತು; ಅವರಿಂದಲೇ ಪಾರವನ್ನು ಕಲಿಯಬೇಕಾಗಿತ್ತು. ಆದ್ದರಿಂದ ನಾವು ಅವರನ್ನು 'ಹಿಟ್ಲರ್' ಅಥವಾ 'ಸರ್ವಾಧಿಕಾರಿ'ಯೆಂದು ಕರೆಯುತ್ತಿದ್ದೆವು. ಅವರ ಏಕಚಿತ್ತತೆಯೆಷ್ಟೆಂದರೆ ಅವರು ಯಕ್ಷಗಾನದ ವಿಷಯ ಆಲೋಚಿಸುತ್ತಾ ಹೋದರೆಂದರೆ ಊಟದ ಗೊಡವೆಯಿಲ್ಲ, ನಿದ್ರೆಯಿಲ್ಲ, ಇತ್ತ ಏನು ಮಾಡಿದರೂ ಗೊತ್ತೇ ಇಲ್ಲ. ವೆಂಕಪ್ಪಯ್ಯನವರ ಅರ್ಥವಾದರೂ ಅಂತೆಯೇ. ಅವರು ಪ್ರತ್ಯಕ್ಷ ಸಿನೆಮಾನಟರಂತೆ ನಟಿಸಿ ಅರ್ಥವನ್ನು ಹೇಳುತ್ತಿದ್ದರು. ಅವರ ಆರ್ಭಟೆಗಳಾದರೂ ಏನು? ಅವುಗಳಿಂದ ಎಂತಹ ಅರ್ಥಧಾರಿಗಳನ್ನೂ ಸೋಲಿಸುತ್ತಿದ್ದರು. ಆದ್ದರಿಂದ ನಮ್ಮೂರಿಗೆ ಅವರೊಂದು ಭೂಷಣ. ನಮ್ಮೂರವರಿಗೆ ಅವರನ್ನು ನೋಡಿದರೆ ತುಂಬಾ ಗೌರವ. ತಲೆಬಾಗಿ ನಮಸ್ಕರಿಸಿಯೇ ಹೋಗುತ್ತಿದ್ದರು. ಹಾಗೆ ಅವರು ಪಡೆದಂತಹ ಬಹುಮಾನಗಳಿಗೂ ಬಿರುದುಗಳಿಗೂ ಪರಿಮಿತಿಯೇ ಇಲ್ಲ.

ಒಮ್ಮೆ ನಮ್ಮೂರಿಗೆ ಕಲೆಕ್ಟರ್‌ಸಾಹೇಬರು ಚಿತ್ತೈಸಿದ್ದರು. ಅವರು ಬಂದಾಗ ಪಟೇಲ ಶ್ಯಾನುಭಾಗರಿಗೆ ನೆಲದಲ್ಲಿ ಕಾಲೇ ನಿಲ್ಲುತ್ತಿರಲಿಲ್ಲ. ಈ ಸಲ ಅವರಿಗಂತೂ ನಮ್ಮೂರ ಯಕ್ಷಗಾನವನ್ನು ಕಲೆಕ್ಟರ್ ಸಾಹೇಬರಿಗೆ ತೋರಿಸಬೇಕೆಂದು ಅಭಿಲಾಷೆಯಾದುದೇ ತಡ, ಒಡನೆಯೇ ನಮ್ಮೂರ ಶಾಲೆಯನ್ನು ತಳಿರುತೋರಣಗಳಿಂದ ಶೃಂಗಾರಮಯವಾಗುವಂತೆ ಮಾಡಿದರು. ರಾತ್ರಿ ಒಂಬತ್ತು ಗಂಟೆಯಾದುದೂ ಯಕ್ಷಗಾನ ಮೊದಲಾದುದೂ ಸರಿಯಾಯಿತು.

ಇತ್ತ ವೆಂಕಪ್ಪಯ್ಯನವರಾದರೋ, ಇಂದು ತಮ್ಮ ಪ್ರೌಢಿಮೆಯನ್ನು ಕಲೆಕ್ಟರ್‌ಸಾಹೇಬರ ಮುಂದೆ ತೋರಿಸಬೇಕು, ಎಲ್ಲರನ್ನೂ ಹಂಗಿಸಿ ಎದುರಿಸಬೇಕು, ಕೀರ್ತಿ ಪಡೆದು ದಿಗಂತವ್ಯಾಪಿಯಾಗಿ ಮೆರೆಯಬೇಕು,—ಎಂದು ಎಣಿಸುತ್ತಾ ಮನದ ಮಂಡಿಗೆಯನ್ನು ಜಗಿಯುತಿದ್ದರು. ಅಂದಿನ ಹಗಲು ಅವರ ಪಾಲಿಗೆ ದೀರ್ಘವೆನಿಸಿತು. ಇಂದು ಕತ್ತಲೆಯಾಗುವುದಿಲ್ಲವೋ ಎಂದು ಹರಟಿದರು. ಅಂತೂ ಕತ್ತಲೆಯಾದುದೇ ತಡ ತನ್ನ ನಿತ್ಯಕರ್ಮಾನುಷ್ಠಾನಗಳನ್ನು ಪೂರೈಸಿ (ಪೂರೈಸಿ ಅನ್ನುವುದಕ್ಕಿಂತ ಅಂತ್ಯಗೊಳಿಸಿ ಅನ್ನುವುದು ಯೋಗ್ಯ) ಊಟ, ಉಪಚಾರಗಳನ್ನು ತೀರಿಸಿ ಸಿಂಗರಿಸಿಕೊಂಡು ಮನೆಯಿಂದ ಹೊರಬಿದ್ದರು. ಒಳಗಿರುವ ತನ್ನ ಪತ್ನಿಯ ನೆನಪು ಮನದಲ್ಲಿಲ್ಲದೆ ಬಾಗಿಲೆಳೆದು ಬೀಗ ಜಡಿದು ವೀಳ್ಯ ಹಾಕಿ ಯಕ್ಷಗಾನಮಂದಿರಕ್ಕೆ ಅಭಿಮುಖವಾಗಿ ಹೋದರು.

ಅಹಾ ಪಾಪ! ನಾನು ಮೊದಲೇ ಹೇಳಿದ್ದೆ, ವೆಂಕಪ್ಪಯ್ಯನವರ ವಾಸಸ್ಥಾನ ಮಲೆನಾಡಿನಲ್ಲಿ ಗುಡ್ಡಗಳ ಮಧ್ಯದಲ್ಲಿ ಎಂದು. ಅವರ ಮಡದಿ ಊಟವನ್ನು ಮುಗಿಸಿ ಕೈ ತೊಳೆಯಲೆಂದು ಹೊರಬಂದಳು. ಬಾಗಿಲೆಳೆದಳು. ಅದು ಹೇಗೆ ತಾನೇ ತೆರೆವುದು? ಕರೆದಳು, ಬೊಬ್ಬಿಟ್ಟಳು, ಅತ್ತಳು. ಅಲ್ಲಿ ಹತ್ತಿರ ಮನೆಗಳೇ ಇಲ್ಲ. ನಿರ್ಜನವಾದ ಪ್ರದೇಶ, ಕಾಡು ಪ್ರದೇಶ, ಭೂತಸಂಚಾರದ ಪ್ರದೇಶ. ಏನು ಮಾಡುವುದು? ಕೊನೆಗೆ ಆಕೆ ಅಲ್ಲಿಯೇ ನಿದ್ದೆ ಹೋದಳು.

ಅತ್ತ ವೆಂಕಪ್ಪಯ್ಯನವರು ಎಂಟು ಗಂಟೆಗೇ ಶಾಲೆ ಸೇರಿದರು. ಜನರೇನೋ ಕಿಕ್ಕಿರಿದು ಬರುತ್ತಿದ್ದರು. ವೆಂಕಪ್ಪಯ್ಯನವರಲ್ಲಿ ನವೋತ್ಸಾಹವು ತುಂಬಿದ್ದಿತು. ಪರವೂರಿನ ಹಲವು ಅರ್ಥಧಾರಿಗಳೂ ಆಗಮಿಸಿದ್ದರು. ಕಲೆಕ್ಟರ್ ಸಾಹೇಬರು ಆಗಮಿಸಿದ್ದರು. 'ದ್ರೌಪದೀ ವಸ್ತ್ರಾಪಹರಣ'ವೆಂಬ ಯಕ್ಷಗಾನವೆಂದಾಯಿತು. ಪಾತ್ರಗಳನ್ನು ರಚಿಸಿದರು. ಶ್ರೀಮಾನ್ ವೆಂಕಪ್ಪಯ್ಯನವರು ದುಶ್ಶಾಸನಪಾತ್ರವನ್ನೂ, ಸೆಟ್ಟರು ದ್ರೌಪದೀಪಾತ್ರವನ್ನೂ, ಇತರರು ಇತರ ಪಾತ್ರಗಳನ್ನೂ ಹೊತ್ತರು. ಆದರೆ ಮುಖ್ಯ ಬೇಕಾದ ಪ್ರಸಂಗದ ಪುಸ್ತಕವೇ ಇರಲಿಲ್ಲ; ಅದು ವೆಂಕಪ್ಪಯ್ಯನವರ ಮನೆಯಲ್ಲಿ ಇದೆ ಎಂದಾಯಿತು. ಕೆಲವರು ವೆಂಕಪ್ಪಯ್ಯನವರೊಡಗೂಡಿ ಅವರ ಮನೆಗೆ ಧಾವಿಸಿದರು.

ಇತ್ತ ನೋಡುತ್ತಿರುವುದೇನು? ವೆಂಕಪ್ಪಯ್ಯನವರಿಗೆ ಜೀವವೇ ಹಾರಿದಂತಾಯ್ತು, ಬೀಗದ ಕೈಯು ಒಳಗಿತ್ತು! ಒತ್ತುವ ಬೀಗವಾದ್ದರಿಂದ ಅವರು ಬೀಗವಿಕ್ಕಿದ್ದರು. ಪತ್ನಿಯನ್ನು ಕರೆದರು. ಹಟಕ್ಕಾಗಿ ಆಕೆಯು ಏಳಲಿಲ್ಲ. ಆದರೆ ವೆಂಕಪ್ಪಯ್ಯನವರು ಯಕ್ಷಗಾನಮಂದಿರಕ್ಕೆ ತಿರುಗಿ ಓಡಿದರು; ಪುಸ್ತಕವಿಲ್ಲದೆ ಎಲ್ಲವನ್ನೂ ತಾನೇ ನಿರ್ವಹಿಸುವೆನೆಂದರು. ಆದರೆ ಇಡೀ ಜಿಲ್ಲೆಯಲ್ಲೇ ಕೀರ್ತಿಯನ್ನು ಪಸರಿಸಿದಂತಹ ವೆಂಕಪ್ಪಯ್ಯನವರು ಅಲ್ಪ ಮಾನಕ್ಕೆ ಹೆದರುವರೇ?—ಇಲ್ಲ. ಒಂದು ಕ್ಷಣದಲ್ಲಿ ನವೋತ್ಸಾಹದಿಂದ ಟೊಂಕ ಕಟ್ಟಿ ಸಿದ್ಧರಾದರು. ಆಗ ಆ ದೃಶ್ಯವನ್ನು ನೋಡಬೇಕಿತ್ತು! ಅದರ ಅಂದ, ಚಂದ, ಇವುಗಳಿಂದ ಉಂಟಾಗುವ ಆನಂದ-ಇವುಗಳ ಸವಿಯನ್ನು ಉಣ್ಣಬೇಕಿತ್ತು! ಅದನ್ನು ಅನುಭವಿಸದವನು ಲೋಕದಲ್ಲಿ ಜನಿಸಿ ಪ್ರಯೋಜನವಿಲ್ಲೆಂಬ ನಮ್ಮೂರ ಮಾತು ಅಕ್ಷರಶಃ ನಿಜ.

ಒಂದೆಡೆ ಎತ್ತರವಾದ ಆಸನದಲ್ಲಿ ಕಲೆಕ್ಟರ್ ಸಾಹೇಬರು; ಅವರ ಎದುರು ಅರ್ಥಧಾರಿಗಳು ಕುಳಿತುಕೊಳ್ಳುವ ಸ್ಥಾನ; ಬಲಗಡೆ ಎಡಗಡೆ ಹೆಂಗಸರು ಗಂಡಸರು. ಅದರ ಮುಂದೆ ಬಾಲಕ ಬಾಲಿಕೆಯರು. ಅಂತೂ ಅದು ದೇವೇಂದ್ರನ ಅಥವಾ ರಾಜನ ಸಭೆಯಂತೆ ಭಾಸ

ವಾಗುತಿತ್ತು. ಇನ್ನೊಮ್ಮೆ ಕಾಣುವಾಗ ಬ್ರಹ್ಮನೊಡನೆ ದೇವತೆಗಳು ರಾಕ್ಷಸರ ಉಪದ್ರವವನ್ನು ತಡೆಯಲಾರದೆ ಬೇಡಿಕೊಳ್ಳುವಂತೆ ತೋರುತಿತ್ತು. ಅವರಲ್ಲಾದರೋ, ಹಲವುಕೆಲವರು ಹಲವು ಕೆಲವು ರೀತಿಯಲ್ಲಿ ಸಭೆಯನ್ನು ಅಲಂಕರಿಸಿದ್ದರು. ಹಲವರು ನಿದ್ರಾಂಗನೆಯೊಳಗಾಗಿ ಶುದ್ಧ ಆನೆಯಂತೆ ತಲೆತೂಗುತಿದ್ದರು; ಇನ್ನೂ ಹಲವರು ಚಾತಕ ಪಕ್ಷಿಗಳಂತೆ ಬಾಯ್ದೆರೆದು ಅರ್ಥಧಾರಿಗಳನ್ನು ನುಂಗುವರೋ ಎಂಬಂತೆ ತೋರುತಿದ್ದರು; ಕೆಲವರಂತೂ ಸಭೆಯ ಮಧ್ಯದಲ್ಲಿ ಮರುಭೂಮಿಯ ಮಧ್ಯೆ ಬೆಳೆದಿರುವ ಪೊದರುಗಳಂತೆ ಮುಂಡಾಸು ಎತ್ತಿದ್ದರು. ಹಾಗೂ ಅದು ರಮಣೀಯವಾಗಿ ಭಯಂಕರವಾದ ದೃಶ್ಯ. ಈ ರೀತಿಯ ಪ್ರಚಂಡ ಸಭೆಯಿಂದ ಮುಂದರಿಯಿತು ಯಕ್ಷಗಾನ.

ಆಗ ನನಗೇನೊ ತಲೆ ತೂಗಿತು. ಆಗಲೇ ಆರಂಭವಾಯಿತು—ವೆಂಕಪ್ಪಯ್ಯನವರ ಅರ್ಥ, ದುಃಶ್ಯಾಸನನ ಆರ್ಭಟೆ. ಅವರ ಆರ್ಭಟೆಯಿಂದ ನಾನು ಎಚ್ಚತ್ತೆನು. ಆಗ ನೋಡುವುದಾದರೂ ಏನು? ಪ್ರತ್ಯಕ್ಷ ದುಃಶ್ಯಾಸನನಂತೆ ಆ ಪಾತ್ರ ವಹಿಸಿದ ವೆಂಕಪ್ಪಯ್ಯನವರು ದ್ರೌಪದಿ ಪಾತ್ರ ವಹಿಸಿದ ಸೆಟ್ಟರಿಗೆ, ಗರ್ಜಿಸಿ ಗರ್ಜಿಸಿ, "ಪಂಚಪಾಂಡವರ ಹೆಂಡತಿಯಾದುದರಿಂದ ಪಾಂಚಾಲಿಯೆಂದು ಹೆಸರು ಪಡೆದೆನೆಂದು ಗರ್ವಿಸ ಬೇಡ!" ಎನ್ನುತ್ತ ಅವಳ ವಸ್ತ್ರಾಪಹರಣ ಮಾಡುತಿದ್ದರು. ವೆಂಕಪ್ಪಯ್ಯನವರ ಅರ್ಥ ಎಲ್ಲರಿಗೂ ಮಿಗಿಲೆನಿಸಿತು. ಜನರೆಲ್ಲಾ ಬೆಪ್ಪಾದರು. ಕಲೆಕ್ಟರರಾದರೋ ಉತ್ತರ ಜಿಲ್ಲೆಯವರು; ಅವರಿಗೆ ಈ ಯಕ್ಷಗಾನದ ಮಹತ್ವವೇನು ಗೊತ್ತು? ಹಾಗೂ ಕೊನೆಗೊಂಡಿತು ಯಕ್ಷಗಾನ. ಕಲೆಕ್ಟರರು, ತಮ್ಮ ಕಡೆಯ ಭಾಷಣದಲ್ಲಿ, "ಯಕ್ಷಗಾನದಲ್ಲಿ ನಿಮಗಿರುವ ಅಭಿಮಾನ, ಅರ್ಥ, ನಟನೆ, ಇವೆಲ್ಲವನ್ನು ಕಂಡು ಕೇಳಿ ನನಗೆ ಆನಂದವಾಯಿತು. ಅದರಲ್ಲೂ ವೆಂಕಪ್ಪಯ್ಯನವರ ಅರ್ಥವೆಂದರೆ ಬಹು ಬಿರುಸು. ಆದ್ದರಿಂದ ನಾನು ಅವರಿಗೆ "ಯಕ್ಷಗಾನ ರತ್ನ" ಎಂಬ ಬಿರುದನ್ನೂ ಹತ್ತು ರೂಪಾಯನ್ನೂ ಬಹುಮಾನವೀಯುವೆನು ಮತ್ತು ನಿಮಗೆಲ್ಲರಿಗೂ ನಾನು ಋಣಿಯಾಗಿರುವೆನು," ಎಂದರು.

ಅಂದಿನಿಂದ ವೆಂಕಪ್ಪಯ್ಯನವರಿಗೆ ಹೆಮ್ಮೆಯೋ ಹೆಮ್ಮೆ, ಅವರ ಗೌರವವು ಇಡೀ ಜಿಲ್ಲೆಯಲ್ಲಿ ಹಬ್ಬಿತು. ಮೈಸೂರು ತನಕವೂ ಹರಡಿತು. "ಯಕ್ಷಗಾನ ರತ್ನ"ವೆಂಬ ಬಿರುದು ಶಾಶ್ವತವಾಯಿತು. ಅವರನ್ನು ನಮ್ಮೂರ ರತ್ನವೆಂದೇ ಕರೆಯುತ್ತಿದ್ದರು.

ನೀವೀಗ ವೆಂಕಪ್ಪಯ್ಯನವರು ಒಬ್ಬ ದೊಡ್ಡ ಯಕ್ಷಗಾನದ ಹುಚ್ಚ, ಒಬ್ಬ ಅನಾಗರಿಕ,—ಎಂದು ಆಲೋಚಿಸಬಹುದು. ಆದರೆ ನಾನು ಹೇಳುತ್ತಿರುವ ಉತ್ತರವಿಷ್ಟೆ: ಚಂದ್ರನಲ್ಲಿ ಎಷ್ಟು ಕಲೆಗಳು ತುಂಬಿಕೊಂಡಿದ್ದರೂ ಅವನ ಪ್ರಕಾಶವು ಹೆಚ್ಚೇರೀತೇ ವಿನಾ ಅದಕ್ಕೆ ಏನಾದರೂ ಕೊರತೆಯುಂಟಾದೀತೇ?—ಇಲ್ಲ. ಎಂದಮೇಲೆ ನಮ್ಮೂರ ಚಂದ್ರನಂತಿರುವ ವೆಂಕಪ್ಪಯ್ಯನವರಿಗೆ ಇದೊಂದು ಭೂಷಣವೇ ಹೊರತು ಕೊರತೆಯಲ್ಲ.

ಆದರೆ "ಯಕ್ಷಗಾನರತ್ನ" ವೆಂಕಪ್ಪಯ್ಯನವರ ಮಡದಿ ಮರುದಿನ ಬೆಳಿಗ್ಗೆ ಹಿಂದಿನ ಬಾಗಿಲಿನಿಂದ ಮುಂದೆ ಬಂದು ಬೀಗವನ್ನು ತೆರೆದು ಗಂಡನನ್ನು ಹಾರೈಸಿ ಕೂತಿದ್ದಳು. ಇನ್ನು ಹೆಚ್ಚು ಹೇಳಲು ನಾನೀಗ ಸಿದ್ಧನಿಲ್ಲ, ಇನ್ನೊಮ್ಮೆ ಸಮಯ ದೊರೆತಾಗ ಚೆನ್ನಾಗಿ ವಿವರಿಸುವೆನು.

**ವಿಷ್ಣುಮೂರ್ತಿ ಉಪಾಧ್ಯಾಯ,**
(V ಫೋರ್ಮ್)

# ಬಯಲಾಸೆ

ಆ ಬೆಟ್ಟದ ಬದಿಯಲ್ಲಿನ ಹುಲ್ಲುಗುಡಿಸಲಲ್ಲಿ ಮಾದನು ವಾಸವಾಗಿದ್ದನು. ಅವನ ಮುದ್ದು ಮಡದಿ ಲಕ್ಷ್ಮಿ ಮತ್ತು ಪ್ರೀತಿಯ ಮಗು ಚಿನ್ನ ಇಷ್ಟೇ ಅವನ ಸಂಸಾರ. ಮನೆ ಬಳಿಯ ಕೆಲವು ಗದ್ದೆಗಳನ್ನು ಗೇಣಿಗೆ ಪಡೆಕೊಂಡು ಸಾಗುವಳಿ ನಡೆಸುತ್ತಿದ್ದನು. ಅವನು ಶ್ರಮಜೀವಿ. ಬೆಳಗಿನ ಜಾವಕ್ಕೆ ಎದ್ದು ಕೆಲಸಕ್ಕೆ ಹೊರಟನೆಂದರೆ ಅವನು ಮನೆಗೆ ಹಿಂತಿರುಗುವುದು ಸಂಜೆಹೊತ್ತಿನಲ್ಲಿ. ಆಗ ಅವನು ಬರುವುದನ್ನು ದೂರದಲ್ಲೇ ಕಂಡು, "ಅಪ್ಪಾ! ಅಪ್ಪಾ!" ಎಂದು ಚಿನ್ನನು ಓಡಿಬಂದು ತಂದೆಯ ಕೈಹಿಡಿದು ಮನೆಗೆ ಕರಕೊಂಡು ಹೋಗುತ್ತಿದ್ದನು. ಹೆಂಡತಿ ಇಕ್ಕುವ ಗಂಜಿನೀರು ಮತ್ತು ರಾಗಿರೊಟ್ಟಿಗಳನ್ನು ಮಾದನು ತಿಂದಾದ ಮೇಲೆ ಚಿನ್ನನು ತನ್ನ ಭಾಷಣಕ್ಕೆ ಸುರುಮಾಡುವನು. ಅವನ ಭಾಷಣದಲ್ಲಿ ಒಳಗೊಳ್ಳದ ವಿಷಯವಿಲ್ಲ. ಯಾವುದೋ ಒಂದು ವಿಷಯದಿಂದ ತೊಡಗಿ ಬೇರಾವುದೋ ವಿಷಯದಲ್ಲಿ ಅವನ ಮಾತು ಕೊನೆಗೊಳ್ಳುತ್ತಿತ್ತು. ಅವನ ಮುದ್ದು ಮಾತುಗಳನ್ನು, ತೊದಲು ನುಡಿಗಳನ್ನು ಕೇಳಿ ಮಾದನು ತನ್ನ ಇಡೀ ದಿನದ ಶ್ರಮವನ್ನು ಮರೆತೇ ಬಿಡುತ್ತಿದ್ದನು. ಅವನ ಮುದ್ದು ಮೊಗದಲ್ಲಿ ಕಳೆಯಾಡುವ ಪ್ರಸನ್ನತೆ, ಉತ್ಸಾಹ, ಕಣ್ಣುಗಳಲ್ಲಿನ ತೇಜ, ಅವುಗಳ ಚಂಚಲತೆ ಇವುಗಳನ್ನು ನೋಡಿ ಮಾದನು ಪ್ರೇಮತಲ್ಲೀನನಾಗಿ ಚಿನ್ನನನ್ನು ಅಪ್ಪಿ ಮುದ್ದಿಸುತ್ತಿದ್ದನು. ಆಗ ಅವನಿಗೆ ಎಷ್ಟು ಹರುಷವಾಗುತ್ತಿತ್ತು! ಚಿನ್ನನ "ಅಪ್ಪಾ!" "ಅಮ್ಮಾ!" ಎಂಬ ಮಾತುಗಳಲ್ಲಿ ಎಷ್ಟೊಂದು ಮಧುರತೆ ಕೂಡಿತ್ತು! ಚಿನ್ನನು ಮಾತು ಮುಗಿಸಿ ಆಟಕ್ಕೆ ತೊಡಗಿದರೆ ಮಾದನೂ ಮಗುವಾಗಿ ಅವನ ಹುಡುಗಾಟಿಕೆಯಲ್ಲಿ ಒಡನಾಡಿಯಾಗುತ್ತಿದ್ದನು. ಮನೆಯಲ್ಲೇ ಕುಳಿತು ಬೇಸರವಾದರೆ ಮನೆ ಹಿಂದಿನ ಗುಡ್ಡ

ವನ್ನೇರಿ ಅಲ್ಲಿ ಕುಳಿತುಕೊಳ್ಳುತ್ತಿದ್ದನು. ಸಂಜೆಹೊತ್ತಿನ ಸೊಬಗಿನ ಸಿರಿಯನ್ನು ಅವನು ಕಣ್ದಣಿಯೆ ನೋಡುತ್ತಿದ್ದರೆ ಯಾವ ಬೇಸರವಾದರೂ ಹೋಗುತ್ತಿತ್ತು; ದೂರ ಸರಿಯುತ್ತಿತ್ತು. ದಿಗಂತದಲ್ಲಿ ಮುಳುಗುವ ಸೂರ್ಯನ ಚೆಲುವಿನ ಬಿಂಬವು ತೋರುವುದು. ಚಿನ್ನದ ಚೆಂಡಿನಂತಿರುವ ಅವನನ್ನು ನೋಡಿ ಚಿನ್ನನು ತನಗೆ ಬೇಕೆಂದು ಕೈಚಾಚುತ್ತಿದ್ದನು. ಬಾನಲ್ಲಿ ಚಿತ್ರವಿಚಿತ್ರಾಕಾರಗಳಿಂದ ತೋರುವ ಮುಗಿಲರಾಶಿಯನ್ನು ನೋಡಿ ತನ್ನ ಕಲ್ಪನಾಪ್ರಪಂಚದಲ್ಲಿ ಮಗ್ನನಾಗುತ್ತಿದ್ದನು ಚಿನ್ನನು. ಅವುಗಳನ್ನು ಆನೆಯೆಂದೂ ಕುದುರೆಯೆಂದೂ ತನಗೆ ತೋಚಿದ ಹೆಸರಿಟ್ಟು ಕರೆಯುತ್ತಿದ್ದನು. ಕೆಳಗೆ ನೋಡುವಾಗ, ಅವರ ಚಿಕ್ಕ ಗುಡಿಸಲು ದಿನಕರನ ಹೊಂಬೆಳಕಿನಲ್ಲಿ ಮಿಂಚುತ್ತಿರುವುದು ಕಾಣುತ್ತಿತ್ತು. ಸುತ್ತಲಿನ ಮರಗಳು ತಂಗಾಳಿಯ ಲಿಟಕ್ಕೆ ತಲೆದೂಗುತ್ತಿದ್ದುವು. ದೂರದಲ್ಲಿ ಹರಿಯುವ ತೊರೆಯ ನೀರು ಆ ಸಂಜೆಹೊತ್ತಿನ ಬೆಳಕಿನೊಡನೆ ಮಿಲಿತವಾಗಿ ಬೆಳ್ಳಿಯಂತೆ ಮಿರುಗುತ್ತಿತ್ತು. ತೊರೆಯ ಇಕ್ಕೆಲದ ತಮ್ಮ ಗದ್ದೆಗಳು ಬಹಳ ರಮಣೀಯವಾಗಿ ತೋರುತ್ತಿದ್ದುವು. ಸೂರ್ಯನು ತನ್ನ ಕಡಲಿನ ಮನೆಯನ್ನು ನೇರಿದೊಡನೆ ಚಿನ್ನ ಮಾದರು ತಮ್ಮ ಹುಲ್ಲುಮನೆಯನ್ನು ಸೇರುತ್ತಿದ್ದರು. ಇಷ್ಟೆಲ್ಲಾ ಮಾದನ ದಿನಚರಿ.

ಚಿನ್ನ ಬೆಳೆದು ದೊಡ್ಡವನಾದನು. "ಬರುವ ಆಟಿಗೆ ನಮ್ಮ ಚಿನ್ನನಿಗೂ ನಿಮ್ಮ ನಾಗಮ್ಮನ ಪುಟ್ಟನಿಗೂ ಭರ್ತಿ ನಾಲ್ಕು ವರ್ಷ ತುಂಬುತ್ತದೆ. ದಿನಗಳು ಹೇಗೆ ಕಳೆಯುತ್ತವೆಯೆಂದು ಗೊತ್ತಾಗುವುದೇ ಇಲ್ಲ," ಎಂದು ಲಕ್ಷ್ಮಿ ಆಗಾಗ ಹೇಳುತ್ತಿದ್ದಳು. ಇದನ್ನು ಕೇಳುತ್ತಿದ್ದ ಚಿನ್ನ, "ಪುಟ್ಟ ಎಂದರೆ ಯಾರಮ್ಮ?" ಎಂದು ಕೇಳುತ್ತಿದ್ದನು. "ನಿನ್ನ ಅಕ್ಕನ ಮಗು, ಚಿನ್ನ!" ಎಂದು ಲಕ್ಷ್ಮಿಯ ಉತ್ತರ. "ಅಮ್ಮಾ, ಪುಟ್ಟನನ್ನು ನೋಡಬೇಕಮ್ಮಾ.........ಅವರು ಇಲ್ಲಿಗೇಕೆ ಬರುವುದಿಲ್ಲ?" ಎಂದು ಚಿನ್ನ ಕುತೂಹಲದಿಂದ ಕೇಳುತ್ತಿದ್ದನು. ಮಗುವಿನ ಹಂಬಲವನ್ನು ನೋಡಿ ಲಕ್ಷ್ಮಿ, "ಅವರನ್ನು ಬರಲು ಹೇಳುವ," ಎಂದು ಹೇಳು

ತಿದ್ದಳು. ಅವಳು ಮಾದನೊಡನೆ ಚಿನ್ನನ ಬಯಕೆಯನ್ನು ಹೇಳಿದೊಡನೆ ಮಾದನಿಗೂ ನಾಗುವನ್ನು ತಮ್ಮಲ್ಲಿಗೆ ಕರೆತರಬೇಕೆಂದು ತೋರಿತು. ತಂಗಿಯನ್ನು ನೋಡದೆ ಹೆಚ್ಚು ಸಮಯವಾಗಿತ್ತು. ಅವಳನ್ನು ನೋಡಿದ ಹಾಗೂ ಆಯಿತು, ಚಿನ್ನನಿಗೆ ಪುಟ್ಟನನ್ನು ತೋರಿಸಿದ ಹಾಗೂ ಆಯಿತು—ಎಂದು ಮಾದನು ಆಲೋಚಿಸಿ, "ಸುಗ್ಗಿಯ ಕೊಯ್ಲು ಮುಗಿದೊಡನೆ ನಮ್ಮಲ್ಲಿಗೆ ಬಾ. ಎಲ್ಲರಿಗೂ ನಿನ್ನನ್ನು ನೋಡುವ ಆಶೆಯಾಗಿದೆ. ಚಿನ್ನನಂತೂ, 'ಅಕ್ಕ ಯಾವಾಗ ಬರುತ್ತಾಳೆ?' ಎಂದು ಕೇಳುತ್ತಿರುತ್ತಾನೆ. ಆದುದರಿಂದ ತಪ್ಪದೆ ಬರಬೇಕು," ಎಂದು ತಂಗಿಗೆ ಹೇಳಿ ಕಳುಹಿಸಿದನು.

ಕೊಯ್ಲು ಮುಗಿದೊಡನೆ ನಾಗುವಳಿಯ ಕೆಲಸವು ಭಾರಿ ಕಡಮೆ. ಆಗ ಹಳ್ಳಿಗರಿಗೆಲ್ಲಾ ರಜೆ. ಆದುದರಿಂದ ನಾಗುವೂ ತುಂಬಾ ಬಿಡುವು ಉಂಟೆಂದು ಮಾದನಲ್ಲಿಗೆ ಬಂದಳು. ಅಂದು ಮಾದನ ಮನೆಯಲ್ಲಿ ಆನಂದವೇ ಆನಂದ. ಹೇಳಲಾರದ ಸಡಗರ. ಲಕ್ಷ್ಮಿಗಂತೂ ಒಂದು ಗಳಿಗೆಯು ವಿಶ್ರಾಂತಿಯಿಲ್ಲ. ಚಿನ್ನನ ಆನಂದವನ್ನಂತೂ ಬಣ್ಣಿಸಲಳವಲ್ಲ. ಅವನ ಆಟಗಳಲ್ಲಿ ಸಹಭಾಗಿಯಾಗಲು ಹೊಸ ಒಡನಾಡಿಯು ಸಿಕ್ಕಿದನೆಂದು ಅವನಿಗೆ ಭಾರಿ ಸಂತೋಷವಾಗಿತ್ತು. ಮಾದನಿಗೆ ತಂಗಿಯೊಡನೆ ಮಾತಾಡಿದಷ್ಟು ಸಾಲದು. ಹೀಗೆ ಮನೆಗೆ ಮನೆಯೇ ಆನಂದದಲ್ಲಿ ತೇಲಾಡಿತು. ಕೆಲವು ದಿನ ಅಣ್ಣನಲ್ಲಿದ್ದು ನಾಗು ಹಿಂತೆರಳಿದಳು.

ಪುಟ್ಟನ ಕೈಗಳಿಗೆ ಚಿನ್ನದ ಬಳೆಗಳಿದ್ದುದನ್ನು ಲಕ್ಷ್ಮಿ ನೋಡಿದ್ದಳು. ತಮ್ಮ ಚಿನ್ನನಿಗೂ ಅಂತಹ ಚಿನ್ನದ ಬಳೆಗಳನ್ನು ಏಕೆ ಮಾಡಿಸಬಾರದು?—ಎಂದು ಲಕ್ಷ್ಮಿ ಎಣಿಸಿದಳು. ಅವನ ಪುಟ್ಟ ಕೈಗಳಿಗೆ ಚಿನ್ನದ ಬಳೆ ತೊಡಿಸಿದರೆ ಎಷ್ಟು ಚಂದ ಕಂಡೀತು! ಈ ವಿಷಯವನ್ನು ಅವಳು ಮಾದನಿಗೂ ಹೇಳಿದಳು. ನಾಗು ಬಂದಂದಿನಿಂದ ಅವನಿಗೂ ಇದೇ ಆಶೆಯಿತ್ತು. ಆದರೆ ಪಾಪ! ಅವನು ಬಡವ. ಚಿನ್ನದ ಬಳೆಗಳೆಂದರೆ ಸುಮ್ಮನೆ ಆಗುವುದೇ? ಆದರೂ ಇದ್ದುದರಲ್ಲಿ ಹಣ ಉಳಿಸಿ

ಯಾದರೂ ಬಳೆಗಳನ್ನು ಮಾಡಿಸಿಯೇ ತೀರುವೆನೆಂದು ಮಾದನು ನಿಶ್ಚಯಿಸಿದನು. ಮುದ್ದು ಮಗನಿಗೆ ತಮ್ಮ ಪ್ರೇಮದ ಕುರುಹಾಗಿ ಎರಡು ಬಳೆಗಳನ್ನು ಮಾಡಿಸಲಾಗದ ತಾನೇಕೆ?

* * * *

ಕೋಣೆಯ ಮೂಲೆಯಲ್ಲಿ ಹಾಸಿಗೆಯ ಮೇಲೆ ಚಿನ್ನನು ಮಲಗಿದ್ದನು. ಸೂರ್ಯನ ತಾಪಕ್ಕೆ ಬಾಡುವ ಹೂವಿನಂತೆ ಅವನ ಮುಖವು ಜ್ವರದಿಂದ ಬಾಡಿತ್ತು. ಕಣ್ಣುಗಳಲ್ಲಿನ ಆ ಚಂಚಲತೆಯಿಲ್ಲ. ಮುಖದ ಮೇಲಿನ ಆ ನಗುವಿಲ್ಲ. ತನ್ನ ತಲೆಯ ಬಳಿ ಕುಳಿತು ಕಣ್ಣೀರು ಮಿಡಿಯುತ್ತಿದ್ದ ತಾಯಿಯನ್ನು ಎವೆಯಿಕ್ಕದೆ ದಿಟ್ಟಿಸುತ್ತಿದ್ದನು. ದುಂಡು ದುಂಡಗಾದ ಅವನ ಶರೀರವು ಕೃಶವಾಗಿ ಕಡ್ಡಿಯಂತಾಗಿತ್ತು. ಅವರೂರಲ್ಲಿ ವಿಷಮಜ್ವರವು ಬೀಡು ಬಿಟ್ಟಿತ್ತು. ರೋಗವು ಅವರ ಹಳ್ಳಿಯ ಮೂಲೆಮೂಲೆಗಳಿಗೆ ತನ್ನ ಕ್ರೂರ ಕೈಗಳನ್ನು ಚಾಚಿತ್ತು. ಅದರ ಹಿಡಿತಕ್ಕೆ ಸಿಕ್ಕಿದ ಜೀವಗಳನ್ನೆಲ್ಲಾ ಹಿಂಡಿ ಆಹುತಿಯಾಗಿ ತೆಗೆದುಕೊಂಡಿತ್ತು. ಎಷ್ಟೋ ಜೀವಿಗಳ ಪ್ರಾಣವನ್ನು ಹೀರಿದ್ದರೂ ಅದರ ದಾಹವು ಇನ್ನೂ ಆರಿರಲಿಲ್ಲ. ಮಾದನ ಸುಖಮಯ ಸಂಸಾರವನ್ನು ನೋಡಿ ಅದು ಅಸೂಯೆಗೊಂಡಿತ್ತು. ಅವರ ಬಾಳಿನ ಹುಣ್ಣಿಮೆಯ ದಿನಗಳನ್ನು ಮಣ್ಣುಗೂಡಿಸುವೆನೆಂದು ಅದು ಎಣಿಸಿರಬಹುದು. ಆದುದರಿಂದಲೇ ಅದು ಚಿನ್ನನ ಮೇಲೆ ತನ್ನ ದೃಷ್ಟಿ ಬೀರಿದುದು. ಅವನ ಹಾಸಿಗೆಯ ಬಳಿ ಲಕ್ಷ್ಮಿ, ಅವನ ತಾಯಿ, ಕುಳಿತು ಕಂಬನಿ ಸುರಿಸುತ್ತಿದ್ದಳು. ಗಳಿಗೆಗೊಮ್ಮೆ ಜ್ವರವಿಳಿದಿದೆಯೋ ಎಂದು ಮೈಮುಟ್ಟಿ ನೋಡುತ್ತಿದ್ದಳು. ಇಲ್ಲವೆಂದು ಕಂಡಾಗ ನಿರಾಶೆಯ ನಿಟ್ಟುಸಿರೊಂದು ಹೊರಹೊಮ್ಮುತ್ತಿತ್ತು. ಮಾದನೂ ಊರಲ್ಲಿದ್ದಿಲ್ಲ. ಅವನು ಚಿನ್ನನಿಗೆ ಬಳೆಗಳನ್ನು ತರಲೆಂದು ಹೋಗಿದ್ದನು. ಇಲ್ಲವಾದರೆ ಲಕ್ಷ್ಮಿ ಅಷ್ಟೊಂದು ನಿರಾಶೆ ಪಡುತ್ತಿದ್ದಿಲ್ಲ. ಹೆಂಗುಸಾದ ತಾನು ಏನು ಮಾಡುವುದು? ಅಂತೂ ಅವಳಿಗೆ ಏನು ಮಾಡುವುದೆಂದು ತೋರಲಿಲ್ಲ. ಮಾದನ ಹಾದಿ ನೋಡುತ್ತಾ ಕುಳಿತಿದ್ದಳು.

ಮಾದನು ಕೈಬಳೆಗಳನ್ನು ತೆಗೆದುಕೊಂಡು ಮನೆಗೆ ಬಂದನು. ಬಹುದಿನಗಳ ಆಶೆ ಅಂದಿಗೆ ಕೈಗೂಡಿತೆಂದು ಅವನಿಗೆ ಎಂದಿಲ್ಲದ ಆನಂದ. ಬಳೆಗಳನ್ನು ತೊಡಿಸಿದಾದ ಚಿನ್ನನಿಗೆ ಎಷ್ಟು ಸಂತೋಷ ವಾದೀತು! ಅವನು ಸಂತೋಷದಿಂದ ಕುಣಿಯುವಾಗ ಅದನ್ನು ನೋಡಿ ಕಣ್ಣಿಗೆ ಹಬ್ಬ ಮಾಡಿಸುವೆನೆಂದು ಅವನು ಎಣಿಸಿದ್ದನು. ಆದರೆ ಅವನ ಎಣಿಕೆ ತಪ್ಪಾಯಿತು. ಅವನು ಬಂದೊಡನೆ ಎಲ್ಲಿದ್ದರೂ ಓಡಿಬಂದು ಸ್ವಾಗತೀಕರಿಸುತ್ತಿದ್ದ ಚಿನ್ನನು ಅಂದು ಕಾಣಲಿಕ್ಕೇ ಇಲ್ಲ. ಮಾದನು, "ಚಿನ್ನಾ, ಚಿನ್ನಾ!" ಎಂದು ಕರೆಯುತ್ತಾ ಮನೆ ಒಳಹೊಕ್ಕನು. ಅಲ್ಲಿ ಅವನು ನೋಡುತ್ತಾನೆ!—ಚಿನ್ನನು ಹಾಸಿಗೆ ಯಲ್ಲಿ ಮಲಗಿದ್ದನು. ಅವನ ಬಳಿ ಅವನ ತಾಯಿ ತಲೆಗೆ ಕೈಯಾ ನಿಸಿ ಕುಳಿತು ಚಿನ್ನನನ್ನೇ ನೋಡುತ್ತಿದ್ದಳು. ಮಾದನಿಗೆ ಫಕ್ಕನೆ ಚಿನ್ನನ ಗುರುತೇ ಹತ್ತಲಿಲ್ಲ. ತಾನು ನೋಡುವುದು ತನ್ನ ಚಿನ್ನನನ್ನಲ್ಲ ಎಂಬ ಭ್ರಾಂತಿಯು ಅವನಿಗಾಯಿತು. ಅವನು ಮನಸ್ಸಿನಲ್ಲಿ ಚಿತ್ರಿಸಿ ಕೊಂಡ ಚಿತ್ರವೆಲ್ಲಿ? ಇಲ್ಲಿ ಕಣ್ಮುಂದೆ ಕಾಣುವ ಚಿತ್ರವೆಲ್ಲಿ? ಆಶ್ಚ ರ್ಯದಿಂದ ಮಾದನು ಶಿಲೆಯಾದನು. ಅವನ ಮಾತು ಕಟ್ಟಿತು. ತಂದೆಯನ್ನು ನೋಡಿ ಚಿನ್ನನು, "ಅ . . . ಪ್ಪಾ!" ಎಂದು ಕ್ಷೀಣವಾಗಿ ನುಡಿದನು.

ಮಾದನು ತಾನು ತಂದ ಬಂಗಾರದ ಕೈಬಳೆಗಳನ್ನು ಚಿನ್ನನ ಕೈಗಳಿಗೆ ತೊಡಿಸುತ್ತಲೇ, ಅವುಗಳು ಜೋಲುಬಿದ್ದುವು. ಮಾದನ ಕಣ್ಣಿಂದ ಒಂದು ತಟಕು ನೀರು ಹನಿಯಿತು. "ಅಯ್ಯೋ ದೇವರೆ, ನಮ್ಮ ಚಿನ್ನನ್ನ ಸಲಹಿಕೊಡು!" ಎಂದು ಲಕ್ಷ್ಮಿ ಹಲುಬಿದಳು.

**ಕೆ. ರಾಮರಾಯ ನಾಯಕ್,**

(VI ಫೋರ್ಮ್)

# ಆ ಚಿತ್ರ

"ಇರಲಿ; ತಂದೇ ತರುವೆನು. ಈ ತಿಂಗಳ ಸಂಬಳದಲ್ಲಿ ಹನ್ನೆರಡಾಣೆ ಉಳಿದಿರುವುದು. ಹನ್ನೆರಡಾಣೆಗೊಂದು ಚಿತ್ರ ಸಿಗಲಾರದೆ?" ಹೀಗೆಂದು ವಿಶ್ವನಾಥನು ತನ್ನಲ್ಲೇ ಯೋಚಿಸಹತ್ತಿದನು. ಕಡೆಗೆ ಚಿತ್ರವನ್ನು ಕೊಂಡುಕೊಳ್ಳುವುದೆಂದು ದೃಢ ನಿಶ್ಚಯ ಮಾಡಿಕೊಂಡು, ಪೇಟೆಯ ಕಡೆಗೆ ಹೊರಟನು.

ವಿಶ್ವನಾಥನು ಒಬ್ಬ ಬಡ ಗುಮಾಸ್ತನಾಗಿದ್ದನು. ತಿಂಗಳಿಗೆ ಬರುವ ಇಪ್ಪತ್ತು ರೂಪಾಯಿಗಳ ಸಂಬಳದಲ್ಲಿ ತನ್ನ ಚಿಕ್ಕ ಸಂಸಾರವನ್ನು ಸಾಗಿಸುತ್ತಿದ್ದನು. ಅವನ ಸಂಸಾರದಲ್ಲಿ, ಅವನು, ಅವನ ಹೆಂಡತಿ ಇಬ್ಬರೇ ಇದ್ದರು. ಜಾಣೆಯಾದ ಅವನ ಹೆಂಡತಿಯು ಬರುವ ಸಂಬಳದಲ್ಲೇ ಚತುರತೆಯಿಂದ ಖರ್ಚುಗಳನ್ನೆಲ್ಲಾ ಸಾಗಿಸುತ್ತಿದ್ದಳು. ಉಳಿಸಲು ಏನೂ ಉಳಿಯುತ್ತಿರಲಿಲ್ಲವಾದರೂ, ಅವರು ಇದ್ದುದರಲ್ಲೇ ತೃಪ್ತಿಹೊಂದುತ್ತಿದ್ದರು. ಹೀಗಿರಲು ಕೆಲವು ವರ್ಷಗಳ ಬಳಿಕ ಅವರಿಗೊಬ್ಬ ಪುತ್ರನು ಜನಿಸಿದನು. ಬಡ ದಂಪತಿಗಳು ಬಹಳವಾಗಿ ಆನಂದಪಟ್ಟರು. ಇದ್ದುದರಲ್ಲಿಯೇ ಹೇಗೂ ಮಾಡಿ ನೆರೆಹೊರೆಯವರಿಗೆ ಸಕ್ಕರೆ ಹಂಚಿದರು. ಮಗುವು ಬೆಳೆಯುತ್ತಾ ಬಂತು. ವಿಶ್ವನಾಥನೂ ಅವನ ಹೆಂಡತಿಯಾದ ಕನಕಳೂ ತಾವಾದರೂ ಉಪವಾಸ ಬಿದ್ದು, ಮಗುವಿಗೇನೂ ಕೊರತೆಯಾಗದಂತೆ ನೋಡುತ್ತಿದ್ದರು. ಆದುದರಿಂದ ಆ ಮಗುವು ಆರೋಗ್ಯವಾಗಿ ಬೆಳೆಯಿತು. ಮಗುವಿಗೆ ದಿನಕರನೆಂದು ಹೆಸರಿಟ್ಟಿದ್ದರೂ, ತಂದೆತಾಯಿಯರಿಗೆ ಮಗುವಾಗಿಯೇ ಇದ್ದನು. ಸಾಧಾರಣ ನಾಲ್ಕು ತಿಂಗಳು ಕಳೆದೊಡನೆ, ಮಗುವಿಗೇನಾದರೂ ಆಟದ ಸಾಮಾನನ್ನು ತರಬೇಕೆಂದು ವಿಶ್ವನಾಥನು ಆಲೋಚಿಸಿದನು. ಇದನ್ನೇ ಕನಕಳೂ ಮೊದಲು ಸೂಚಿಸಿದ್ದಳು;

ಆದರೆ ಹಣದ ಅಭಾವದಿಂದ ಇದುವರೆಗೆ ಏನನ್ನೂ ತರಲಾಗಿರಲಿಲ್ಲ. ವಿಶ್ವನಾಥನು ಬಹಳ ಆಲೋಚಿಸಿ ಒಂದು ಬಣ್ಣದ ಚಿತ್ರವನ್ನು ತರುವುದೆಂದು ನಿಶ್ಚಯಿಸಿದನು. ಅದಕ್ಕೆ ಚೌಕಟ್ಟನ್ನೂ ಕನ್ನಡಿಯನ್ನೂ ಹಾಕಿ ಬಿಟ್ಟರೆ ಅದು ಬಹುಕಾಲಕ್ಕೆ, ಉಪಯುಕ್ತವಾಗಿರಬಹುದೆಂದು ಅವನು ಯೋಚಿಸಿದನು. ಆದುದರಿಂದ ಅವನು ಮೇಲೆ ಹೇಳಿದಂತೆ ಚಿತ್ರವನ್ನು ಕೊಂಡುಕೊಳ್ಳಲು ಪೇಟೆಗೆ ಹೊರಟನು.

ಆ ದಿನ ಭಾನುವಾರವಾಗಿತ್ತು. ವಿಶ್ವನಾಥನಿಗೆ ಆ ದಿನ ಬಿಡುವು ಇದ್ದಿತು. ಆದುದರಿಂದ ಬಹಳ ಕಷ್ಟದಿಂದ, ಒಮ್ಮೊಮ್ಮೆ ಉಪವಾಸ ಮಾಡಿ ಉಳಿಸಿದ ಹನ್ನೆರಡಾಣೆಯನ್ನು ತೆಗೆದುಕೊಂಡು, ಪೇಟೆಗೆ ಹೋಗಿ, ತಕ್ಕ ಚಿತ್ರವನ್ನು ಹುಡುಕಹತ್ತಿದನು. ಕೆಲವು ಕಡೆಗಳಲ್ಲಿ ಆತನ ಮನಸ್ಸಿಗೊಪ್ಪುವ ಚಿತ್ರಗಳು ಸಿಕ್ಕಿದರೂ, ಅವಕ್ಕೆ ಬೆಲೆ ವಿಪರೀತವಾಗಿತ್ತು. ಬೆಲೆ ಕಡಿಮೆ ಇದ್ದ ಕೀಳುತರದ ಚಿತ್ರಗಳನ್ನು ಕೊಳ್ಳಲು ಆತನಿಗೆ ಮನಸ್ಸಿರಲಿಲ್ಲ. ಅನೇಕ ಕಡೆಗಳಲ್ಲಿ ಆತನು ಬಹಳ ಹೊತ್ತಿನತನಕ ಚಿತ್ರಗಳನ್ನೆಲ್ಲಾ ನೋಡಿ ಒಂದನ್ನೂ ಕೊಂಡುಕೊಳ್ಳಲಿಲ್ಲವೆಂದು ಅಂಗಡಿಯವರ ದೂಷಣೆಗೆ ಗುರಿಯಾದನು. ಕಡೆಗೆ ಒಂದು ಸಣ್ಣ ಅಂಗಡಿಯಲ್ಲಿದ್ದ ಕೆಲವು ಚಿತ್ರಗಳನ್ನು ವಿಶ್ವನಾಥನು ಕಂಡನು. ಅವುಗಳಲ್ಲೊಂದು ವೀರಮಾರುತಿಯದಾಗಿದ್ದಿತು. ಮಾರುತಿಯು ತನ್ನೆದೆಯನ್ನು ಸೀಳಿ ಶ್ರೀರಾಮಸೀತೆಯರನ್ನು ತೋರಿಸುವ ದೃಶ್ಯವು ಅದರಲ್ಲಿ ಚಿತ್ರಿಸಲ್ಪಟ್ಟಿದ್ದಿತು. ಚಿತ್ರವೂ ಸಾಧಾರಣ ಚೆನ್ನಾಗಿತ್ತು. ಅಂಥ ರೌದ್ರಚಿತ್ರವನ್ನು ಯಾರೂ ಕೊಂಡುಕೊಂಡಿರಲಿಲ್ಲ. ಅದು ಒಂದು ಮೂಲೆಯಲ್ಲಿ ಬಿದ್ದಿತ್ತು. ವಿಶ್ವನಾಥನು ಹನ್ನೆರಡಾಣೆಗೆ ಅದನ್ನು ಕೇಳಿದೊಡನೆ, ಅದು ಮಾರಿ ಹೋದರೆ ಸಾಕೆಂದಿದ್ದ ಅಂಗಡಿಯವನು ಬೇಗನದನ್ನು ತೆಗೆದುಕೊಟ್ಟನು. ತಕ್ಕ ಚಿತ್ರವು ಸಿಕ್ಕಿತೆಂದು ಹಿಗ್ಗಿ, ವಿಶ್ವನಾಥನು ಮನೆಗೆ ಮರಳಿದನು.

ಚಿತ್ರಕ್ಕೆ ಚೌಕಟ್ಟನ್ನು ಹಾಕುವುದು ಕಷ್ಟವಾಗಿರಲಿಲ್ಲ. ಮನೆಯಲ್ಲಿದ್ದೊಂದು ಹಳೇ ಚಿತ್ರದ ಚೌಕಟ್ಟನ್ನು ಕಿತ್ತು, ಹೊಸ ಚಿತ್ರವನ್ನು

ವಿಶ್ವನಾಥನು ಅದರಿಂದ ಅಲಂಕರಿಸಿ, ಅದನ್ನು ಮನೆಯ ಎದುರಿನ ಚಾವಡಿಯ ಗೋಡೆಯ ಮೇಲೆ ತೂಗಿಸಿದನು.

ಇತ್ತ ದಿನಕರನು ದಿನದಿನಕ್ಕೆ ಪ್ರವರ್ಧಮಾನನಾಗಿ ಬೆಳೆಯ ಹತ್ತಿದನು. ನಾಲ್ಕು ತಿಂಗಳ ವಯಸ್ಸಿನಲ್ಲಿ, ಮಲಗಿದ್ದಲ್ಲಿ ತಿರುಗಿ ಬಿದ್ದು ಹೊಟ್ಟೆ ಸರಿಸಿ ಮುಂದರಿಯಲಾರಂಭಿಸಿದನು. ಅನಂತರ ಚತುಷ್ಪಾದಗಳ ಅನುಕರಣೆಯನ್ನು ಅವನು ಮಾಡಹತ್ತಿದನು. ಈಗ, ತನಗೆ ಇಷ್ಟಬಂದ ಕಡೆಗಳಲ್ಲಿ ತಿರುಗುವ ಸಾಮರ್ಥ್ಯವು ಬಂದೊಡನೆ ದಿನಕರನು ಮೆಟ್ಟಲುಗಳನ್ನು ದಾಟಿ ಹೋಗಲೂ ಅಂಗಳಕ್ಕಿಳಿಯಲೂ ಪ್ರಯತ್ನಿಸಿದನು. ಹೊಸ್ತಿಲುಗಳನ್ನು ದಾಟುವಾಗ ಅನೇಕ ಸಲ ಉರುಳಿ ದುದೂ ಉಂಟು. ಕಲ್ಲು, ಕನ್ನಡಿ, ಮಣ್ಣು ಮುಂತಾದುವುಗಳಿಗೂ ಆಹಾರ ಪದಾರ್ಥಗಳಿಗೂ ಅವನು ಭೇದವನ್ನೆಣಿಸುತ್ತಿರಲಿಲ್ಲ. ಚಾವಡಿ ಯಿಂದ ಅಂಗಣಕ್ಕಿಳಿಯುವಾಗ ಬಿದ್ದುದಕ್ಕೆ ಲೆಕ್ಕವೇ ಇರಲಿಲ್ಲ. ತಂದೆಯು ತಂಧಿದ್ದ ಚಿತ್ರದ ಕಡೆಗೆ ಆತನ ಲಕ್ಷ್ಯವು ಇರಲೇ ಇಲ್ಲ. ಕಾರಣವೇನೆಂದರೆ, ಅವನಿಗೆ ಎಟಕದ ಸ್ಥಳವಾದ, ಗೋಡೆಯ ಮೇಲೆ ಅದು ತೂಗಾಡಿಸಲ್ಪಟ್ಟಿತ್ತು. ಮಾತ್ರವಲ್ಲ, ಅವನಿಗೆ, ಆಡಲು ಅದನ್ನು ಕೈಗೆ ಕೊಟ್ಟಾಗ, ಅದರ ಅರ್ಥವೂ ಆತನಿಗಾಗುತಿರಲಿಲ್ಲ. ಹೀಗಾಗಿ ಚಿತ್ರದ ಕಡೆಗೆ ಯಾರ ಲಕ್ಷ್ಯವೂ ಇರಲಿಲ್ಲ.

ಒಂದು ಒಂದೂವರೆ ವರ್ಷಗಳು ಕಳೆದುವು. ದಿನಕರನೀಗ ಶೈಶವಾವಸ್ಥೆಯನ್ನು ಕಳೆದು ಬಾಲಕನಾಗಿದ್ದನು. ತಾಯಿಯು ಅಡಿಗೆ ಮನೆಯನ್ನು ಬಿಟ್ಟಾಗ, ಬೆಂಕಿಯನ್ನು ಮುಟ್ಟಿ ಪರೀಕ್ಷಿಸುವುದು, ಅಟ್ಟದ ಏಣಿಯ ಮೆಟ್ಟಲುಗಳನ್ನೇರಿ ಒಂದೇ ಸಲ ಕೆಳಗೆ ಬರುವುದು ಮುಂತಾದ ಅಮೋಘಕೃತಿಗಳನ್ನು ಅವನು ಆರಂಭಿಸಿದನು. ವಿಶ್ವನಾಥನಿಗೆ ಮಾಸಿಕವೇತನವು ಅಲ್ಪವಾಗಿದ್ದರೂ, ಪಿತ್ರಾರ್ಜಿತವಾದ ನಾಲ್ಕು ಕೋಣೆಗಳಿಂದಲೂ ಒಂದು ಅಟ್ಟದಿಂದಲೂ ಕೂಡಿದ ಒಂದು ಸಾಧಾ ರಣ ತರಗತಿಯ ಮನೆಯಿದ್ದಿತು. ತನ್ನ ಸ್ವಂತ ಪರಿಶ್ರಮದಿಂದ ಒಂದು ಚಿಕ್ಕ ಸುಂದರವಾದ ತೋಟವನ್ನಾತನು ರಚಿಸಿದ್ದನು. ಗಿಡ

ಗಳಿಗೆ ನೀರು ಒಟ್ಟುಗೂಡಿಡಲು ಒಂದು ನಾಲ್ಕಡಿ ಆಳದ ಹೊಂಡವೂ, ಒಂದು ಗೊಬ್ಬರದ ಹೊಂಡವೂ, ತೋಟದ ಸುತ್ತಲೂ ಒಂದು ಬೇಲಿಯೂ ವಿಶ್ವನಾಥನಿಂದಲೇ ನಿರ್ಮಿಸಲ್ಪಟ್ಟಿದ್ದುವು.

ಒಮ್ಮೆ ವಿಶ್ವನಾಥನು ಆಫೀಸಿಗೆ ಹೋಗಿದ್ದಾಗ, ಕನಕಳು ಅಡಿಗೆ ಮನೆಯಲ್ಲಿ ಅಡಿಗೆ ಮಾಡುತ್ತಿದ್ದಳು. ಆಗ ದಿನಕರನು ಮೆಲ್ಲಗೆ ಹೊರಗೆ ಬಂದು ಅಂಗಣಕ್ಕಿಳಿದನು. ನೀರಿನ ಹೊಂಡದ ಬಳಿಗೆ ಬಂದು ಅದರಲ್ಲೇನಿದೆಯೆಂದು ನೋಡಲು ಇಣಿಕಿದನು. ಇನ್ನೊಬ್ಬ ಹುಡುಗನು, ಅದರಲ್ಲಿ ಕಾಣಿಸಿದನು. ಅವನನ್ನು ಹಿಡಿಯಲು ಹೋಗಿ ತಾನೇ ಅದರಲ್ಲಿ ಬಿದ್ದು ಬಿಟ್ಟನು. ಅಷ್ಟರಲ್ಲೊಂದು ಕಾಗೆಯು ಹಾರಿ ಬಂದು ಮಾರುತಿಯ ಪಟದ ಮೇಲೆ ಕುಳಿತಿತು. ಕಾಗೆಯು ತನ್ನ ಮೇಲೆ ಕುಳಿತ ಅವಮಾನವನ್ನು ಸಹಿಸಲಾರದೆಯೋ ಎಂಬಂತೆ ಪಟದ ಆಣಿಯು ಜಾರಿ ಪಟವು ನೆಲಕ್ಕುರುಳಿತು. ಅದು ದೊಪ್ಪನೆ ಬಿದ್ದ ಸದ್ದನ್ನು ಕೇಳಿ ಕನಕಳು ಓಡಿ ಬಂದಳು. ಆಗ ಹೊಂಡದಲ್ಲಿ ಗುಳು ಗುಳು ಶಬ್ದವನ್ನು ಕೇಳಿ ಅಲ್ಲಿಗೆ ಧಾವಿಸಿದಳು. ದಿನಕರನು ಈಜು ಕಲಿತು ಹೊಂಡದ ಬುಡಕ್ಕೆ ಹೋಗಿದ್ದನು. ತಾಯಿಯು ಹೇಗೂ ಆತನನ್ನು ಅಲ್ಲಿಂದೆತ್ತಿ ಉಪಚರಿಸಿದಳು. ಚಿತ್ರದ ಕನ್ನಡಿಯು ಇದೆಲ್ಲ ವನ್ನೂ ನೋಡಿ ದುಃಖದಿಂದಲೆಂಬಂತೆ ಚೂರಾಗಿದ್ದಿತು.

ಆ ದಿನ ವಿಶ್ವನಾಥನು ಆಫೀಸಿನಿಂದ ಬಂದೊಡನೆ, ಈ ವಿಚಾರ ವನ್ನು ಅವನಿಗೆ ತಿಳಿಸಿ, ಚಿತ್ರಕ್ಕೆ ತಿರುಗಿ ಕನ್ನಡಿ ಹಾಕಬೇಕೆಂದು ಕನ ಕಳು ಹೇಳಿದಳು. ವಿಶ್ವನಾಥನು, ಆ ಚಿತ್ರದಿಂದ ಮಗುವಿನ ಪ್ರಾಣ ವುಳಿಯಿತೆಂದು ಅದಕ್ಕೆ ಹೊಸಕನ್ನಡಿ ಹಾಕಿ ತೂಗಾಡಿಸಿದನು. ಅಂದಿ ನಿಂದ ದಿನಕರನ ಲಕ್ಷ್ಯವು ಆ ಚಿತ್ರದ ಕಡೆಗೆ ತಿರುಗಿತು. ಮೊದ ಲಂತೆಯೇ ಲೂಟಿ ಮಾಡುತ್ತಿದ್ದರೂ ಅವನು ಚಿತ್ರವನ್ನು ಗೌರವಿಸು ತ್ತಿದ್ದನು. ಐದು ವರ್ಷ ತುಂಬಲು, ತಂದೆತಾಯಿಯರು ಅವನನ್ನು ಶಾಲೆಗೆ ಸೇರಿಸಿದರು. ಈಗ ದಿನಕರನ ಮನಸ್ಸು ಲೂಟಿಯಿಂದ ಪರಿಶೀಲನೆಯ ಕಡೆಗೆ ತಿರುಗಿತು. ಮನೆಯಲ್ಲಿದ್ದ ಪುಸ್ತಕಗಳ ಚಿತ್ರ

ಗಳನ್ನು ಆಗಾಗ ಅವನು ಕಿತ್ತು ತೆಗೆಯುತಿದ್ದನು. ಆಗಾಗ ಶಾಲೆಯ ಹುಡುಗರಿಂದ ಸಿಗರೇಟಿನ ಅಥವಾ ಬೆಂಕಿಪೆಟ್ಟಿಗೆಗಳನ್ನು ತಂದು ಸಂಗ್ರಹಿಸುತಿದ್ದನು. ಬಡವನಾದರೂ ವಿಶ್ವನಾಥನು ಸ್ಲೇಟುಪುಸ್ತಕಗಳನ್ನು ದಿನಕರನಿಗೆ ತೆಗೆಸಿಕೊಟ್ಟಿದ್ದನು. ತನ್ನ ಬಡತನದ ಗಂಧವು ಕೂಡ ಅವನಿಗೆ ಸುಳಿಯದಂತೆ ಅವನು ಯತ್ನಿಸುತಿದ್ದನು.

ದಿನಕರನು ಆಗಾಗ ತನ್ನ ಶಾಲೆಯ ಮಿತ್ರರನ್ನು ಕರೆದುಕೊಂಡು ಬಂದು ತನ್ನ ಪ್ರಾಣವನ್ನುಳಿಸಿದ್ದ ಚಿತ್ರವನ್ನು ತೋರಿಸುತಿದ್ದನು. ಆಗಾಗ, ರಜೆಯ ದಿನಗಳಲ್ಲಿ, ಗಂಭೀರವಾದ ಆ ಚಿತ್ರವನ್ನು ನೋಡುತ್ತಾ ಸುಮ್ಮನೆ ಕುಳಿತುಕೊಳ್ಳುತಿದ್ದನು. ಆಗಾಗ ಆ ಚಿತ್ರದಲ್ಲಿದ್ದಂತೆ, ಎದೆಯ ಮೇಲಿನ ಅಂಗಿಯನ್ನು ತೆಗೆದು, "ಅಮ್ಮಾ, ಇದೋ, ರಾಮಸೀತೆಯರನ್ನು ತೋರಿಸುವೆನು!" ಎಂದು ಕೂಗಾಡುತಿದ್ದನು. ಒಮ್ಮೆ ದಿನಕರನು, ತಂದೆಯೊಡನೆ ಒಂದು ಬಿಗಿಲನ್ನು ತರಲು ಹೇಳಿದ್ದನು. ವಿಶ್ವನಾಥನು ಆಫೀಸಿನಿಂದ ಬರುವಾಗ ರಾತ್ರಿಯಾಗುತಿತ್ತು. ದಿನಕರನು ಸಂಜೆ ಶಾಲೆಯಿಂದ ಬಂದು, ಉಪಾಹಾರವನ್ನು ತಿಂದು ಹೊರಗೆ ಬಂದನು. ಆಗ ಅವನ ಮನಸ್ಸಿನಲ್ಲಿ ಒಂದು ಸಂಶಯವು ಉದ್ಭವಿಸಿತು. ತಂದೆಯು ಬಿಗಿಲನ್ನು ತರುವನೋ ಇಲ್ಲವೋ, ಎಂದುಕೊಂಡು ಆತನು ಉದ್ವಿಗ್ನನಾದನು. ಕೂಡಲೆ, ಮನುಷ್ಯರಿಗೆಲ್ಲಾ ದೇವರೇ ಬುದ್ಧಿಕೊಡುವುದೆಂದು ಹೇಳಿದ್ದ ತಾಯಿಯ ಮಾತು ನೆನಪಿಗೆ ಬಂತು. ಆದುದರಿಂದ ತಂದೆಗೆ, ಬಿಗಿಲನ್ನು ತರುವ ಬುದ್ಧಿಯನ್ನು ಕೊಡಲು ದಿನಕರನು ತನ್ನ ದೇವರಾದ ಮಾರುತಿಯನ್ನು ಪ್ರಾರ್ಥಿಸಿದನು. ಆ ದಿನ ಬಿಗಿಲನ್ನು ತಂದೆಯು ತಂದೇ ತಂದನು. ಆದುದರಿಂದ ದಿನಕರನಿಗೆ ದೈವಭಕ್ತಿಯು ತಾನಾಗಿ ಉದ್ಭವಿಸಿತು. ಅವನು ಆಗಾಗ ತಾಯಿಯು ಕೊಟ್ಟಿದ್ದ ತಿಂಡಿಯನ್ನು ಅಂಗಿಯ ಜೇಬಿನಲ್ಲಿ ತುಂಬಿಸಿ, ಚಾವಡಿಗೆ ತಂದು, ಮಾರುತಿಗೆ ತಿನ್ನಿಸುವಂತೆ ಮಾಡುತಿದ್ದನು. ಶಾಲೆಯಲ್ಲಿ ಯಾರಾದರೂ ತನಗೆ ಹೊಡೆದಿದ್ದರೆ, ಮಾರುತಿಯೊಡನೆ ಬಂದು ಹೇಳುತಿದ್ದನು. ಇವುಗಳಿಂದೆಲ್ಲಾ ಅವನ ಶೀಲದ ಮೇಲೆ ಬಲವಾದ ಸತ್ಪರಿಣಾಮವುಂಟಾಯಿತು.

ವರ್ಷಗಳು ಕಳೆದುವು. ದಿನಕರನಾಗ ಎಂಟನೇ ತರಗತಿಯಲ್ಲಿದ್ದನು. ಪ್ರಾಥಮಿಕ ಶಾಲೆಯನ್ನು ಬಿಟ್ಟು ಹಾಯ್‌ಸ್ಕೂಲನ್ನು ಅವನು ಸೇರಿದ್ದನು. ಒಮ್ಮೊಮ್ಮೆ ಚಿತ್ರಕಲೆಯ ಅಭಿವೃದ್ಧಿಗಾಗಿ, ಆ ಚಿತ್ರದ ಅನುಕರಣೆ ಮಾಡಿ ಮಾರುತಿಯ ಚಿತ್ರವನ್ನು ಆತನು ಬಿಡಿಸುತಿದ್ದನು.

ದಿನಕರನು ಮೆಟ್ರಿಕ್ ಕಲಿಯುತ್ತಿರುವಾಗ, ವಿಶ್ವನಾಥನಿಗೆ ಅಕಸ್ಮಾತ್ತಾಗಿ ಕಾಯಿಲೆಯು ಆರಂಭವಾಯಿತು. ಒಂದೆರಡು ತಿಂಗಳ ಕಾಲ ಅದರಿಂದ ಅವನು ನರಳಿದನು. ಆ ತಿಂಗಳುಗಳಲ್ಲಿ ದಿನಕರನು ಬಹಳ ಪರಿಶ್ರಮದಿಂದ ತಂದೆಯ ಶುಶ್ರೂಷೆಯನ್ನು ಮಾಡಿದನು. ಪ್ರತಿ ರಾತ್ರಿಯೂ ಮಲಗುವಾಗ ಮಾರುತಿಯನ್ನು ದೈನ್ಯದಿಂದ ತನ್ನ ತಂದೆಯ ಪ್ರಾಣವುಳಿಸಲು ಪ್ರಾರ್ಥಿಸುತಿದ್ದನು. ಅವನ ಪ್ರಾರ್ಥನೆಯಿಂದಲೆಂಬಂತೆ ವಿಶ್ವನಾಥನು ಗುಣಹೊಂದಿದನು. ಆದರೆ ಒಂದೆರಡು ತಿಂಗಳು ಗೈರುಹಾಜರಾದುದರಿಂದ, ನಿರ್ದಯರಾದ ಮೇಲಾಫೀಸರರು ಅವನ ಕೆಲಸವನ್ನು ತೆಗೆದರು. ಇದರಿಂದ ಅವರಿಗೆ ಹೊಟ್ಟೆಗಿಲ್ಲವಾಯಿತು. ಎಲ್ಲಾದರೂ ಮೊದಲು ಉಳಿಸಿದ್ದ ಅಲ್ಪಸ್ವಲ್ಪ ಹಣವಿದ್ದರೂ, ಅದು ರೋಗದ ಉಪಶಮನಕ್ಕಾಗಿ ವೆಚ್ಚವಾಯಿತು. ವಿಶ್ವನಾಥನಿಗೆ ಹೃದ್ರೋಗವು ತಗಲಿತು. ರೋಗದಿಂದ ಅಶಕ್ತವಾಗಿದ್ದಾತನ ಶರೀರವು ಮಾನಸಿಕ ಆಘಾತದಿಂದ ಚೂರ್ಣವಾಯಿತು. ಆತನು ಒಮ್ಮೆ ದಿನಕರನು ತನ್ನನ್ನು ಸೇವಿಸುವಾಗಲೇ ದೇಹ ಬಿಟ್ಟನು.

ಬಡ ಕನಕಳು ನಿಸ್ಸಹಾಯಳಾದಳು. ದಿನಕರನಿಲ್ಲದಿರುತಿದ್ದಲ್ಲಿ, ಅವಳು ಖಂಡಿತವಾಗಿಯೂ ಆತ್ಮಹತ್ಯೆ ಮಾಡಿಕೊಳ್ಳುತಿದ್ದಳು. ಆದರೆ ಈಗ ಅವಳ ಆಸೆಗಳೆಲ್ಲವೂ ದಿನಕರನಲ್ಲಿಯೇ ಕೇಂದ್ರೀಕೃತವಾಗಿದ್ದುವು. ಅವಳು ಅಲ್ಲಲ್ಲಿ ಚಿಲ್ಲರೆ ಕೆಲಸಗಳನ್ನು ಮಾಡಿ, ದಿನಕರನ ವಿದ್ಯಾಭ್ಯಾಸವನ್ನು ಮುಂದುವರಿಸಿದಳು. ದಿನಕರನು, ತಾಯಿಯು ತನಗಾಗಿ ಪಡುತಿದ್ದ ಕಷ್ಟಗಳನ್ನೆಲ್ಲಾ ನೋಡಿ, ಪ್ರತಿನಿತ್ಯವೂ ಅವಳು ದೀರ್ಘಾಯುವಾಗಲೆಂದು ಮಾರುತಿಯನ್ನು ಪ್ರಾರ್ಥಿಸುತಿದ್ದನು. ಈ

ವರೆಗೂ ಪಟದಲ್ಲೇನೂ ಬದಲಾವಣೆಯಾಗಿರಲಿಲ್ಲ. ಅದು ಮೌನವಾಗಿಯೂ ಗಂಭೀರವಾಗಿಯೂ ಅಲ್ಲಿ ತೂಗಾಡುತಿತ್ತು.

ದಿನಕರನು ತನ್ನ ಕುಶಾಗ್ರಮತಿಯಿಂದ ವಿದ್ಯೆಯನ್ನು ಮುಂದುವರಿಸಿದನು. ಒಮ್ಮೆ ಅವನ ತಂದೆಯ ತಂಗಿಯಾದ ಜಾನಕಿಯು ಅವರ ಮನೆಗೆ ಬಂದಳು. ಅವಳು ಇವರ ದುಃಸ್ಥಿತಿಯನ್ನು ಕಂಡು ಮರುಗಿದಳು. ಅವಳ ಗಂಡನಂತೂ ಇನ್ನೂರು ರೂಪಾಯಿ ಸಂಬಳವಿದ್ದ ಹುದ್ದೇದಾರನಾಗಿದ್ದನು. ಆದುದರಿಂದ, ಅವಳು ಇವರಿಗೆ ಅಲ್ಪಸ್ವಲ್ಪ ಸಹಾಯ ಮಾಡಹತ್ತಿದಳು.

ಕನಕಳ ಮನೆಯು ಹಾಳಾಗುತ್ತಾ ಬಂದಿತ್ತು. ಬಹಳ ಪುರಾತನ ಮನೆಯಾಗಿದ್ದುದರಿಂದ, ಮನೆಯ ಗೋಡೆಗಳೆಲ್ಲಾ ದುರ್ಬಲವಾಗಿ, ಇಲಿಗಳಿಗೆ ಆಶ್ರಯಸ್ಥಾನಗಳಾಗಿದ್ದುವು. ದಿನಕರನು, ಜಾನಕಿಯ ಸಹಾಯದಿಂದ ಅದನ್ನು ಸರಿಪಡಿಸಲು ಯತ್ನಿಸಿದನು. ಒಮ್ಮೆ ಮನೆಯನ್ನು ಸರಿಮಾಡುವಾಗ ಆ ಚಿತ್ರವನ್ನು ಜಾನಕಿಯು ಕಂಡಳು. "ಇದೇಕಪ್ಪಾ ಈ ಹಾಳು ಹಳೇ ಚಿತ್ರ!" ಎಂದುಕೊಂಡು ಅವಳು ಅದನ್ನು ತೆಗೆದೆಸೆಯಲು ಯತ್ನಿಸಿದಾಗ ದಿನಕರನು, "ಅಕ್ಕಾ, ಬೇಡ. ಅದು ಹೋದರೆ, ನನ್ನ ಸ್ನೇಹಿತನೂ ದೇವರೂ ಹೋದಂತಾಗುವುದು. ಬಾಲ್ಯದ ಸ್ಮರಣೆಯನ್ನದು ತರುವುದು. ತಂದೆಯವರ ನೆನಪಿಗಾದರೂ ಅದು ಇರಲಿ," ಎಂದು ಬೇಗನೆ ಹೇಳಿದನು. ಜಾನಕಿಯು ಆ ಚಿತ್ರದ ಮೇಲಿನ ಅವನ ಪ್ರೇಮವನ್ನೂ ಭಕ್ತಿಯನ್ನೂ ಕಂಡು ಚಕಿತಳಾದಳು.

ಹೇಗೂ ಆ ಚಿತ್ರವು ಅಲ್ಲೇ ತೂಗಾಡುತಿತ್ತು. ಮನೆಯ ಉತ್ಕರ್ಷದ ಸಮಯವನ್ನೂ ಅಧಃಪತನವನ್ನೂ ಅದು ಕಂಡಿತ್ತು. ಇನ್ನೊಮ್ಮೆ ಮನೆಯ ಸ್ಥಿತಿಯು ಉತ್ತಮವಾದರೂ ಅದರಲ್ಲೇನೂ ಬದಲಾವಣೆಯಾಗದು. ಮನೆಯ ಸ್ಥಿತಿಯು ದಿನಕರನಿಂದ ಉತ್ತಮವಾಗ ಬಹುದು. ಆಗಾಗ ಕನಕಳೂ ದಿನಕರನೂ ಚಿತ್ರವನ್ನು ನೋಡಿ ಕಣ್ಣೀರಿಡುತಿದ್ದರು.

**ಯು. ಶ್ರೀನಿವಾಸರಾವ್,**
(IV ಫೋರ್ಮ್)

# ನೆಳಲು ಬೆಳಕು

ಊರ ಮೂಲೆಯಲ್ಲಿರುವ ಗುಡಿಸಲು. ಒಳಗೆ ಒಂದು ಹಣತೆ ನಸುಕಾಗಿ ಉರಿಯುತ್ತಿದೆ. ಹರಕು ಚಾಪೆಯ ಮೇಲೆ ಮಲಗಿದ್ದ ಹೆಂಗಸು ಸಹಿಸಲು ವಿಾರಿದ ಬೇನೆಯಿಂದ ಬಡವಾಗಿ, ಹಣತೆಯ ಪ್ರಕಾಶದಲ್ಲಿ ನರಳುತ್ತಿರುವಳು. ಬಳಿಯಲ್ಲಿ ಹುಡುಗನೊಬ್ಬನು ಕೂತು ಏನನ್ನೋ ಚಿಂತಿಸುತಿದ್ದು, ತನ್ನ ಮೈಯ್ಯ ನೆರಳು—ಅಸ್ಪಷ್ಟವಾದ ನೆರಳು—ಆಕೆಯ ಮೈಮೇಲೆ ಬೀಳುವಂತೆ ಮಾಡಿದ್ದನು. ಮಗನ ನೆರಳಿನಲ್ಲಿಯೆ ದಿನದಿನದ ಜೀವನವನ್ನು ಮಾಡುತಿದ್ದ ಹೆಂಗಸಿಂದು—ಮಗನ ನೆರಳಲ್ಲಿಯೆ, ಮೃತ್ಯುಮುಖಳಾಗಿದ್ದಳು.

ರಾತ್ರಿಯ ಶಾಂತತೆಯನ್ನೂ ಮಗನ ಚಿಂತೆಯನ್ನೂ ಭೇದಿಸಿತು ತಾಯಿಯ ಕ್ಷೀಣ ಸ್ವರ:

“ರಾಘು, ನೋಡಪ್ಪಾ, ಶಾಸ್ತ್ರಿಗಳ ಮನೆಗೆ ಹೋಗು. ಎರಡನೆ ಬಾರಿಯಾದರೂ ಕರುಣೆ ಬಾರದಿರಲಾರದು. ಹೋಗಿ ಮದ್ದನ್ನು ಬೇಡು.”

ಹೊರಗಿನ ಭೀಕರತೆ ಇನ್ನೂ ಹೆಚ್ಚಿದ್ದಿತು. ರಘುವಿನ ಮನಸ್ಸಿನಲ್ಲಿ ತಾಯಿಯ ಕುರಿತು ಚಿಂತೆ ಈಗ ಹೊರಗಿನ ಭೀಕರತೆಯೊಡನೆ ಸೇರಿ, ಭೀತಿಯ ಆಕಾರವನ್ನು ಹೊಂದಿತು. ಆದರೂ ಮಾತೃಪ್ರೇಮದಿಂದ ಧೈರ್ಯಗೊಂಡೆದ್ದು ಶಾಸ್ತ್ರಿಗಳ ಮನೆಗೆ ನಡೆದನು. ಆ ದಿನದ ರಾತ್ರಿ,—ಆ ದಿನ ಅವನು ನಡೆದು ಹೋಗುತ್ತಿರುವ ಆ ತಾಸು ಯುಗವಾಗಿ ಕಂಡಿತು. ಅರ್ಧದಾರಿಯಲ್ಲಿ ನಾಲ್ಕು ಕಡೆಯಿಂದಲೂ ಬಂದು ಆಕಾಶದಲ್ಲಿ ತುಂಬಿದ ಮೋಡಗಳು ಜಡಿಮಳೆಯನ್ನು ಸುರಿಸಿದುವು. ಕಣ್ಣು ಕುಕ್ಕುವ ಮಿಂಚು ಕತ್ತಲೆಯನ್ನು ಭೇದಿಸಿ ನೆಲಕ್ಕಪ್ಪಳಿಸಿತು,

ಕಿವಿಯನ್ನು ಸೀಳುವ ಗುಡುಗು ಮತ್ತೆ ಕತ್ತಲೆಯನ್ನು ತುಂಬಿತು. ಯಾವುದಕ್ಕೂ ಹೆದರದೆ, ರಘು ಶಾಸ್ತ್ರಿಗಳ ಮನೆಗೆ ಧಡೆದನು.

ಶಾಸ್ತ್ರಿಗಳ ಮನೆಬಾಗಿಲಿನ ಸರಪಣಿಯನ್ನು ಅಲ್ಲಾಡಿಸಿ, ಶಾಸ್ತ್ರಿಗಳನ್ನು ಕರೆದನು. "ಯಾರೋ ಬಂದಿರಬೇಕು," ಎಂಬ ಮಾತು ಒಳಗಿಂದ ಕೇಳಿಸಿತು. ಅನಂತರ ಐದು ನಿಮಿಷಗಳಲ್ಲಿ ಬಾಗಿಲು ತೆರೆಯಿತು. ವಿದ್ಯುದ್ದೀಪದ ಪ್ರಕಾಶದಲ್ಲಿ ತನ್ನ ಉದ್ದವಾದ ನೆರಳನ್ನು ನೆಲದ ಮೇಲೆ ಹಾಸಿ, ಡಾಕ್ಟರರು ನಿಂತಿದ್ದರು.

"ಕ್ಷಮಿಸಬೇಕು; ಮಹಾಸ್ವಾಮಿ. ಬಡವನು ನಾನು, ತಾವೆ ನನ್ನ ದೇವರು. ತಾಯಿಯನ್ನು ಉಳಿಸಿಕೊಡಿ," ಎಂದು ರಘುವು ದೀನ ಸ್ವರದಿಂದ ಅಂಗಲಾಚಿ ಬೇಡಿದನು. ದೂರದ ಮೋಡಗಳಲ್ಲಿ ತಿರಿಗೊಮ್ಮೆ ಮಿಂಚು ಮೂಡಿ, ಸಮೀಪದ ನೆಲಕ್ಕೆ ಬಡಿದು, ಗುಡುಗಿ ಗುಡುಗಿ ಮಾಯವಾಯಿತು. ಮಳೆಯು ಹೊಡೆತ ಜೋರಾಗಿ, ನೀರಿನಲ್ಲಿ ತೊಯ್ದು ಹೋದ ರಘುವನ್ನು ನಡುಗಿಸಿತು.

"ನಾಳೆ ಬೆಳಿಗ್ಯೆ ಬರುವೆನು: ಬಂಡಿಯಿಲ್ಲ, ಕಾರು ತಂದಿಲ್ಲ," ಎಂದವರೇ ಡಾಕ್ಟರರು ಒಳನಡೆದು ಬಿಟ್ಟರು. ಮನೆಯಾಳು ಬಾಗಿಲನ್ನು ಮುಚ್ಚಲು ಬಂದನು. ರಘುವು ಬಾಗಿಲ ಬಳಿ ಕೆಲಹೊತ್ತು ನಿಂತು ಮನೆ ಕಡೆಗೆ ನಡೆದನು. "ತಾಯಿ ಹೇಗಿರುವಳು?" ಎಂಬ ಮನಸ್ಸಿನ ಆ ಹಂಬಲದ ತೆರೆಗಳಲ್ಲಿ ತೇಲಿ ಮನೆ ಮುಟ್ಟುವಾಗ, ಅಲ್ಲಿಯ ಹಣತೆಯೂ ನೊಂದಿ ಹೋಗಿತ್ತು; ತಾಯಿಯನ್ನು ಕರೆದಾಗ, ಅವಳುತ್ತರ ಬರಲಿಲ್ಲ. ದೀರ್ಘವಾದ ಉಸಿರೊಂದು ಕೇಳಿಸಿತು. ಮಲಗಿರಬಹುದು ಅಥವಾ ಅಶಕ್ತಿ ಮೀರಿಬಂದು ಉಸಿರೆಳೆಯುತ್ತಿರಬಹುದು.

"ತಾಯಿ!" ಎಂದನು.

"ಬಾ, ಮಗು—ಡಾಕ್ಟರಿಲ್ಲದಿದ್ದರೂ ಚಿಂತೆಯಿಲ್ಲ, ಮಲಗಿಬಿಡು, ಮಳೆ ಹೊಡೆಯುತ್ತಿದೆ," ಎಂದಾಕೆ ಸ್ವಸ್ಥಳಾದಳು.

ಕತ್ತಲೆ ಇನ್ನೂ ಹರಿಯಲಿಲ್ಲ. ರಘುವು ಥಕ್ಕನೆ ಎದ್ದುಬಿಟ್ಟನು. ತಾಯೊಡನೆ ಏನನ್ನೂ ಹೇಳದೆ, ಕತ್ತಲಲ್ಲಿ ಹೊರಗೆ ನಡೆದುಬಿಟ್ಟನು.

ಮಳೆಯು ಸುರಿಯುತಿತ್ತು. ಮಿಂಚು ಹೊಳೆಯುತಿತ್ತು. ಗುಡುಗು ಹೊಡೆಯುತಿತ್ತು.

ರಘುವು ತಿರಿಗೊಮ್ಮೆ ಡಾಕ್ಟರರ ಮನೆಯನ್ನು ಸೇರಿದ್ದನು. ಡಾಕ್ಟರರ ಮನೆಯ ಬಾಗಿಲು ತೆರೆದಿದ್ದುದರಿಂದ ನೆಟ್ಟಗೆ ಒಳನಡೆದನು. ಆ ಕಡೆ ಈ ಕಡೆ ಸುಳಿದಾಡಿ—"ಡಾಕ್ಟರೇ" ಎಂದು ಮೆಲ್ಲನಿಯಿಂದ ಕರೆದನು.

ನಿರುತ್ತರ.

"ಡಾಕ್ಟರೇ, ಒಂದೊಮ್ಮೆ ಬಂದು, ತಾಯಿಯನ್ನು ರಕ್ಷಿಸಿರಿ," ಎಂದು ರಘು ಬೇಡಿದನು. ಯಾರೋ ಬರುತ್ತಿರುವರೆಂದು ಕಾಲ್ಸಪ್ಪಳ ದಿಂದ ರಘುವಿಗೆ ಗೊತ್ತಾಯಿತು. ಗೊತ್ತಾಗುವುದರೊಡನೆ, ಯಾರೊ ತನ್ನನ್ನು ತಿವಿದಂತಾಯಿತು.

"ಅಯ್ಯೋ" ಎಂದು ಬೊಬ್ಬಿಡುತ್ತಾ ರಘು ಧೊಪ್ಪನೆ ನೆಲದ ಮೇಲೆ ಬೀಳಲು ತೆರೆದಿಟ್ಟ ಬಾಗಿಲಿನಿಂದ ಯಾರೋ ಹೊರಗೆ ಓಡಿ ದಂತಾದುದೂ ರಘುವಿಗೆ ಗೊತ್ತಾಗಲಿಲ್ಲ.

"ಕಳ್ಳರು," ಎಂದು ಮನೆಯ ಚಾಕರನು ಬೊಬ್ಬೆಕ್ಕಿದನು.

ಡಾಕ್ಟ್ರು, ಡಾಕ್ಟ್ರ ಹೆಂಡತಿ ಮಕ್ಕಳು ಎಲ್ಲವರೂ ಒಂದೇ ಬಾರಿಗೆ ಓಡಿ ಬಂದು ವಿದ್ಯುಚ್ಛಕ್ತಿಯ ದೀಪವನ್ನು ಬೆಳಗಿಸಿ, ರಘುವು ಬಿದ್ದ ಸ್ಥಳಕ್ಕೆ ಬಂದು ಮುಟ್ಟಿದರು. ಡಾಕ್ಟ್ರು ರಘುವಿನ ಮುಖವನ್ನು ಕಂಡು, ಬೆನ್ನಿನಿಂದ ಬಸಿಯುತ್ತಿರುವ ರಕ್ತವನ್ನೂ ನೋಡಿ "ಹಾಯ್, ದೇವರೇ" ಎನ್ನುತ್ತ ರಘುವಿನೊಡನೆ ಮಾತನಾಡಿದರು. ಪ್ರಥಮ ಚಿಕಿತ್ಸೆಯ ಸಾಮಗ್ರಿಗಳೆಲ್ಲವನ್ನು ಡಾಕ್ಟರ ಮಗನು ತಂದಿರಿಸಿದನು. ಡಾಕ್ಟರು ರಘುವಿಗೆ ಪ್ರಥಮ ಚಿಕಿತ್ಸೆಯನ್ನು ಮಾಡುವಾಗ, ಆತನು ಚೇತರಿಸಿ, "ಡಾಕ್ಟರರೇ, ತಾಯಿ ಬಳಲುತ್ತಿರುವಳು. ಅಲ್ಲಿ ಹೋಗಿ ಚಿಕಿತ್ಸೆ ಮಾಡಿ ಬನ್ನಿ," ಎಂದು ಡಾಕ್ಟರರಲ್ಲಿ ಬಿನ್ನವಿಸುವಾಗ ಡಾಕ್ಟರನ ಹೃದಯಕ್ಕೆ ಶೂಲದಿಂದ ತಿವಿದಂತಾಯಿತು.

"ಆಗಬಹುದು; ಈಗಲೆ ಅಲ್ಲಿಗೆ ಹೋಗಿ ನೋಡಿ ಬರುವೆನು," ಎನ್ನುತ್ತ ರಘುವಿನ ಪ್ರಥಮ ಚಿಕಿತ್ಸೆಯೆಲ್ಲವನ್ನೂ ತೀರಿಸಿ, ಆತನನ್ನು ಒಂದು ಮಂಚದ ಮೇಲೇರಿಸಿ, ಡಾಕ್ಟರನು ರಘುವಿನ ಮನೆಗೆ ತೆರಳಿದನು.

ಮಳೆಯು ಯಥಾಪ್ರಕಾರ ಸುರಿಯುತಿದ್ದಿತು. ಮಿಂಚು ಯಥಾ ಪ್ರಕಾರ ಹೊಳೆಯುತಿತ್ತು. ಗುಡುಗು ಯಥಾಪ್ರಕಾರ ಹೊಡೆಯು ತಿದ್ದಿತು. ತಾನು ಯಥಾಪ್ರಕಾರ ಈಗ ತಾನೆ ನಡೆಯುತ್ತಿರುವೆನೆಂದು ರಘುವಿನ ಮನೆ ಮುಟ್ಟುವಾಗ ಡಾಕ್ಟರರಿಗೆ ಹೊಳೆದು ಬಂದಿತು.

"ಮಗೂ ರಾಘು, ಸಾಯುತ್ತೇನಪ್ಪಾ. ಸಾಯುತ್ತೇನೆ"ನ್ನುವಾಗ ಡಾಕ್ಟರರು ಹೆಂಗಸಿನ ಸಮೀಪವನ್ನು ಮುಟ್ಟಿಬಂದರು. ನಾಡಿಯನ್ನು ಪರೀಕ್ಷಿಸಿದರು.

"ಧೈರ್ಯಗೊಳ್ಳು. ಗುಣಮುಖವಾಗುವೆ," ಎಂದು ಡಾಕ್ಟರರು ಭರವಸೆ ಕೊಟ್ಟರು.

"ಅಯ್ಯಯ್ಯೋ, ರಾಘು, ಏತಕ್ಕೆ ಮಳೆಗೆ ಓಡಿದೆ..........." ಎಂದು ಹೆಂಗಸು ಬೇನೆಯಿಂದ ನರಳುವ ಬೆನ್ನನ್ನು ಮುರಿದುಕೊಂಡಳು.

"ಧೈರ್ಯಗೊಳ್ಳು, ಗುಣಮುಖವಾಗುವೆ," ಎಂದು ಡಾಕ್ಟರರು ತಿರಿಗಿ ಹೇಳಿದರು. "ಅಯ್ಯಯ್ಯೋ" ಎಂದಾಕೆ ನಿರುತ್ತರಳಾದಾಗ, ಡಾಕ್ಟರರು ಎದ್ದು ನಿಂತು ನಾಡಿಯನ್ನು ಹಿಡಿದಾಗ—ಪ್ರಾಣಪಕ್ಷಿ ಗೂಡಿನಿಂದ ಹಾರಿಹೋಗಿದೆಯೆಂದು ತಿಳಿದುಕೊಂಡರು. ಏನು ಮಾಡ ಬೇಕೆಂದು ತೋಚದವರಾಗಿ ಡಾಕ್ಟರರು ಎದ್ದು ಹೊರಬಂದರು.

**ಎಮ್. ಸಂಜೀವ ಕುಡ್ವ,**
(V ಫೋರ್ಮ್)

# ಸಭಾ ಭಾಷಣ

ನನಗೆ ಅಂದು ಸುಮಾರು ಒಂಭತ್ತು ವರುಷ ಪ್ರಾಯವಿದ್ದಿರಬಹುದು. ವಿಶಾಖಪಟ್ಟಣದ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ನಾನು ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದೆ. ನನಗೆ ಅಲ್ಲಿಯ ಭಾಷೆಯ ಹೆಚ್ಚಿನ ಜ್ಞಾನವಿಲ್ಲದಿದ್ದರೂ ಕೊಂಚ ಇಂಗ್ಲೀಷ ಮತ್ತು ತೆಲುಗು ಭಾಷೆಯ ಮಿಶ್ರಣದಿಂದ ಎಲ್ಲರ ಕೂಡೆ ಮಾತನಾಡುತ್ತಿದ್ದೆ. ಅಂತೂ ಬಹು ದೂರವಾದ ಮಂಗಳೂರಿನಿಂದ ಬಂದ ಹೊಸ ಹುಡುಗನಿಗೆ ಅಲ್ಲಿಯ ಪ್ರತಿ ಒಬ್ಬ ಹುಡುಗನ ಪರಿಚಯವಾಯಿತು.

ಹೈ ಸ್ಕೂಲುಗಳಲ್ಲಿ ಕಲಿಯುತ್ತಿದ್ದ ಹುಡುಗರು ತಮ್ಮ ವಾಕ್ಚಾತುರ್ಯ ಯನ್ನು ಬೆಳೆಸಲು ವಾಗ್ವರ್ಧಿನಿ ಸಭೆಗಳನ್ನು ಕೂಡಿಸುವುದುಂಟು. ಆದರೆ ಇಂತಹ ಸಭೆಗಳು ಹಾಯರ್ ಎಲಿಮೆಂಟರಿ ಶಾಲೆಗಳಲ್ಲಿ ಕಂಡು ಬರುವುದು ಅಪರೂಪ. ಆದರೆ ನಮ್ಮ ಶಾಲೆಯಲ್ಲಿ ಪ್ರತಿ ಶುಕ್ರವಾರ ಚರ್ಚಾ ಸಭೆಗಳನ್ನು ಕೂಡಿಸುತ್ತಿದ್ದರು. ಅಲ್ಲಿ ಈ ಸಭೆಗಳ ಕಾರ್ಯ ಕ್ರಮ ಕಡಿಮೆ ಆಗದ ಹಾಗೆ ಒಂದು ಒಳ್ಳೇ ಮದ್ದನ್ನು ತಯಾರಿಸಿದ್ದರು. ಕಾರ್ಯದರ್ಶಿಯು ಚರ್ಚೆ ಮಾಡುವ ವಿಷಯದೊಡನೆ ತನ್ನ ಇಷ್ಟದ ಆರು ಜನರ ಹೆಸರುಗಳನ್ನು ಬೋರ್ಡಿನಲ್ಲಿ ಬರೆಯುತ್ತಿದ್ದನು. ಈ ಆರು ಜನರು ಅಂದು ಅಗತ್ಯವಾಗಿ ಮಾತನಾಡಬೇಕಾಗಿದ್ದಿತು. ಹೀಗೆಂದು ಕಾರ್ಯದರ್ಶಿಯು ಆರನೇ ತರಗತಿಯ ಕೆಳಗಣ ಹುಡುಗ ರನ್ನು ಆರಿಸುವುದು ಬಹಳ ಕಮ್ಮಿ.

ಅದೊಂದು ಬುಧವಾರ ನಾನು ಯಥಾಪ್ರಕಾರ ಶಾಲೆಗೆ ಹೋದೆ. ಆದರೆ ನಾನು ಬರುವ ಚರ್ಚಾ ಸಭೆಯಲ್ಲಿ ಅಂದು ಪ್ರಾರಂಭ ಭಾಷಣಕಾರನಾಗಿ ನೇಮಿಸಲ್ಪಟ್ಟಿದ್ದೇನೆ ಎಂದು ಕೇಳಿದಾಗ

ನನಗಾದ ಆಶ್ಚರ್ಯವನ್ನು ಹೇಳಬಲ್ಲಿರಾ? ಒಂದು ಸಲ ಹೆಸರನ್ನು ಬೋರ್ಡಿನ ಮೇಲೆ ಹಾಕಿದ ಮೇಲೆ ಅದನ್ನು ಹೊಡೆಯುವುದು ಅಸಂಭವವೇ, ಅಲ್ಲಾ ಅಸಾಧ್ಯವಾಗಿತ್ತು. ನಾನು ಈ ಚರ್ಚಾ ಸಭೆಯಲ್ಲಿ ಮಾತನಾಡುವೆನು ಎಂದು ಮನಸ್ಸಿನಲ್ಲಿ ನಿರ್ಧರಿಸಿ ಮನೆಯ ಕಡೆಗೆ ಹೊರಟೆ.

ಇನ್ನು ಬರೀ ಎರಡು ದಿನಗಳಿವೆ! ನಾನು ನನ್ನ ಕಾರ್ಯದಲ್ಲಿ ಸಮರ್ಥನಾದೇನೊ? ದೇವರೇ ಬಲ್ಲ. ನಾನು ಬಹಳ ಪ್ರಯಾಸದಿಂದ ನನ್ನ ಉಪಾಧ್ಯಾಯರ ಸಹಾಯದಿಂದ ಒಂದು ದೊಡ್ಡ ಭಾಷಣವನ್ನು ತಯಾರಿಸಿದೆ. ಅದನ್ನು ಚೆನ್ನಾಗಿ ಬಾಯಿಪಾಠ ಕಲಿತೆ. ಆದರೂ ಶಾಲೆಯ ನಾನ್ನೂರ ಮಕ್ಕಳ ಮುಂದೆ ನಿಂತು ಮಾತನಾಡುವಾಗ ಅದು ಮಾಯವಾದೀತೆಂಬ ಹೆದರಿಕೆಯಿಂದ ನಾನು ನನ್ನ ಭಾಷಣ ವನ್ನು ಮನೆಯಲ್ಲೇ ಎರಡು ಮೂರು ನಾರಿ ನನ್ನ ತಂದೆತಾಯಿಗಳ ಮುಂದೆ ಕೊಟ್ಟು ತೋರಿಸಿದೆ.

ಆ ಶುಭದಿನದ ಪ್ರಭಾತವಾಯಿತು. ಸೂರ್ಯನು ಸಮುದ್ರ ದಿಂದ ಏರುವ (ಅದು ಪೂರ್ವ ಕರಾವಳಿ) ದೃಶ್ಯವು ನನ್ನ ಹೃದಯ ದಲ್ಲಿ ಒಂದು ತರದ ಕಂಪನ ಉಂಟುಮಾಡಿತು. ನಾನು ಸಮುದ್ರದ ಕಡೆಗೆ ಹೋಗಿ ನಿಂತೆ. ನನ್ನ ಭಾಷಣವನ್ನು ತೆರೆಗಳಿಗೆ ಕೊಟ್ಟೆ. ಅಷ್ಟ ರೊಳಗೆ ಸೂರ್ಯದೇವರ ರಥವು ದಿಗಂತವನ್ನು ಬಿಟ್ಟು ಮೇಲೆ ಏರಿತು. ನಾನು ಮನೆಗೆ ಹೋಗಿ ಅಂದಿನ ಪಾಠದ ತಯಾರಿಯನ್ನು ಮಾಡಿ ಶಾಲೆಗೆ ತೆರಳಿದೆನು. ನನಗೆ ಆ ದಿನದ ಪಾಠಗಳು ಒಂದಿಷ್ಟಾದರೂ ಮನಸ್ಸಿಗೆ ಹೋಗಲಿಲ್ಲ.

ಮಧ್ಯಾಹ್ನವಾಯಿತು. ಕಡೆಗೆ ಚರ್ಚಾ ಸಭೆ ಕೂಡಿಸಿ ಆಯಿತು. ಕಾರ್ಯದರ್ಶಿಯು ಮುಂಚಿನ ತರ್ಕಸಭೆಯ ವರದಿಯನ್ನು ಓದಿ ಹೇಳಿ ದನು. ನನ್ನ ಸರತಿಯು ಇದೀಗ ಬಂತು. ನಾನು ಜಂಭದ ಎದೆಯು ಹುಂಜದಂತೆ ಪ್ಲಾಟಫೋರ್ಮನ್ನು ಏರಿದೆನು. ಆದರೆ ನನ್ನ ಎದೆ ಗಲ್ಲ

ಕ್ಕೇರಿಸಲು ತೆಗೆದುಕೊಂಡು ಹೋಗುವ ಕಳ್ಳನ ಎದೆಗಿಂತ ಜೋರಾಗಿ ಬಡಿಯುತಿತ್ತು.

ನನ್ನ ಭಾಷಣದ ಅನುವಾದವು ಹೀಗಾಗುತ್ತದೆ—"ಅಧ್ಯಕ್ಷ ಮಹಾಶಯರೇ, ಪೂಜ್ಯ ಗುರುಗಳೇ ಮತ್ತು ಮಿತ್ರರೇ! ನಾನು ಹೇಳುವುದೇನೆಂದರೆ ಕೃಷಿ ವೃತ್ತಿಯು ಕೈಗಾರಿಕೆಗಿಂತ ಉತ್ತಮ. ಏಕೆಂದರೆ ಕೃಷಿ ವೃತ್ತಿ ಮಾಡುವವರ ಆರೋಗ್ಯ ಬಹಳ ಒಳ್ಳೇದಾಗಿರುತ್ತದೆ." ಇಷ್ಟು ಹೇಳುವುದರಲ್ಲಿ ನಾನು ಒಂದು ಶಬ್ದ ತಪ್ಪಿ ಬಿಟ್ಟೆ. ಅಧ್ಯಕ್ಷರು ಇಷ್ಟು ಚಿಕ್ಕವನು ಪ್ರಥಮ ಭಾಷಣಕ್ಕೆ ಬಂದುದನ್ನು ನೋಡಿ ನಸು ನಕ್ಕಿದ್ದರು. ಈಗ ತಪ್ಪಾದ ಕೂಡಲೆ ಅವರಿಗೆ ನಗು ತಡೆಯಲಾಗದಾಯಿತು. ಅವರ ನಗುವಿನ ಹಿಂದೆ ಇಡೀ ಶಾಲೆಯೇ ನಕ್ಕಿತು. ಗಳಿಗೆಯೊಳಗೇ ನನ್ನ ಇಡೀ ಭಾಷಣವೇ ನನಗೆ ಮರೆತು ಹೋಯಿತು. ಪುನಃ ಕೈಯಲ್ಲಿದ್ದ ಕಾಗದವನ್ನು ನೋಡಿ ಮಾತನಾಡಲು ಧೈರ್ಯ ಬರಲಿಲ್ಲ. ಕೂಡಲೇ ನಾನು ನನ್ನ ಮೂರನೇ ವಾಕ್ಯದೊಡನೆ ನನ್ನ ಭಾಷಣವನ್ನು ಮುಗಿಸಿದೆ. "ಇಷ್ಟರಲ್ಲಿ ನನ್ನ ಮಾತನ್ನು ಮುಗಿಸಿ, ನನ್ನ ಸ್ಥಾನವನ್ನು ಸೇರುವೆನು," ಎಂದು ಹೇಳಿದ ಹಾಗೆ ಮಾಡಿ ಕೆಳಗಿಳಿದೆನು. ಅಲ್ಲಿಯ ಹುಡುಗರು ಎಂದಿಗೂ ಇಷ್ಟು ಚಿಕ್ಕ ಭಾಷಣವನ್ನು ಕೇಳಲೇ ಇದ್ದಿಲ್ಲ. ಇಡೀ ಶಾಲೆಯಲ್ಲಿ ನನ್ನ ಭಾಷಣವು ಪ್ರಸಿದ್ಧಿಗೆ ಬಂತು. ನನ್ನ ಗೆಳೆಯರೆಲ್ಲರೂ ಇದೇ ಸಂಗತಿಯನ್ನೆತ್ತಿ ನನಗೆ ತಮಾಷೆ ಮಾಡಿದರು.

**ಬಿ. ಚಂದ್ರಶೇಖರರಾವ್,**
(VI ಫೋರ್ಮ್)

# ಸಾಹೇಬರ ಪತ್ತೇದಾರಿಕೆ

ಕಗ್ಗತ್ತಲು ಬಹು ದಟ್ಟವಾಗಿ ಹಬ್ಬಿಕೊಂಡಿದ್ದಿತು. ಮುಖಕ್ಕೆ ಮುಖ ವಿಟ್ಟು ದಿಟ್ಟಿಸಿ ನೋಡಿದರೂ ಕಾಣಿಸದು. ಅಲ್ಲೊಂದು ಇಲ್ಲೊಂದು ರಾತ್ರಿಂಚರದ ಶಬ್ದದ ವಿನಾ ಮತ್ತೇನೂ ವಿಶೇಷವಾದ ಶಬ್ದವಿರಲಿಲ್ಲ. ಮಳೆಗಾಲವಾಗಿದ್ದರೂ ಮೋಡಗಳು ಕೂಡಾ ಚಲಿಸದೆ ಏನನ್ನೋ ನಿರೀಕ್ಷಿಸುತ್ತಿದ್ದವು. ವಾಚಕರೇ, ಇತ್ತ ಬನ್ನಿ! ಇಷ್ಟು ವಿಶೇಷವಾದ ನಿಶ್ಶಬ್ದತೆಗೆ ಕಾರಣವೇನೆಂಬುದನ್ನು ನಾವು ಪರೀಕ್ಷಿಸಿ ನೋಡುವ.

ಅಗೋ—ನಮ್ಮೂರಿನ ಪತ್ತೇದಾರ ಮಹಾಶಯನು ಮೆಲ್ಲಡಿಯಿಡುತ್ತಾ ಬರುತ್ತಿದ್ದಾನೆ. ಅವನ ಕೈಯಲ್ಲಿ ಥಳಥಳಿಸುವಂತಹದೇನದು? ಕತ್ತಲೆಯಲ್ಲಿಯೂ ಲಕಲಕನೆ ಮಿರುಗುತ್ತಿದೆ. ಒಹೋ! ಮತ್ತೇನಾಗಿರಬೇಕದು? ಬಹುಶಃ ಪಿಸ್ತೂಲು.

ನಮ್ಮೂರ ಪತ್ತೇದಾರ ಮಹಾಶಯರ ವಿಷಯ ಸ್ವಲ್ಪ ಹೇಳಿಬಿಡುತ್ತೇನೆ. ನಮ್ಮೂರಲ್ಲಿ ಈ ಪ್ರಸಿದ್ಧ ಮಹಾನುಭಾವರನ್ನು "ಸಾಹೇಬರೆ"ಂದು ಕರೆಯುವ ರೂಢಿಯಿದೆ. ಸಾಹೇಬರ ಹೆಸರೇನೊ ನನಗೆ ತಿಳಿಯದು; ಅಂತೂ ಸಾಹೇಬರೆಂದೇ ಇಟ್ಟುಕೊಳ್ಳೋಣ. ಸಾಹೇಬರು ಎಂತೆಂತಹ ಗಹನವಾದ, ಗೂಢವಾದ, ಭಯಂಕರವಾದ ಕೊಲೆಗಳನ್ನೂ ಕೂಡ ಬರೀ ಒಂದು ವರ್ಷದೊಳಗೆ ಪತ್ತೆ ಮಾಡಿದ್ದರು. ಅವರ ಅತ್ಯದ್ಭುತವಾದ ಪತ್ತೆಯ ವಿಷಯ ಒಂದು ವಿಚಾರವನ್ನು ಹೇಳಿಬಿಡುತ್ತೇನೆ. ಒಮ್ಮೆ ನಮ್ಮೂರ ಪಂಚಾಯತ ಬೋರ್ಡಿನ ಚುನಾವಣೆಯ ಸಮಯದಲ್ಲಿ ರಾಮಪ್ಪ ಆಳ್ವರಿಗೂ ತಿಮ್ಮಪ್ಪ ಶೆಟ್ಟರಿಗೂ ಘೋರ ಸಂಗ್ರಾಮವಾಯಿತಂತೆ. ಆ ಸಂಗ್ರಾಮದಲ್ಲಿ ಶೆಟ್ಟರ ಭಯಂಕರವಾದ ಪಡೆಯೊಡನೆ ಯುದ್ಧ ಮಾಡ

ಲಾಗದೆ ಆಳ್ವರು ಹತರಾಗಿ ಹೋದರಂತೆ. ಆಳ್ವರು ಸತ್ತ ಒಂದು ವಾರದೊಳಗಾಗಿಯೇ ಶೆಟ್ಟರು ಕೂಡಾ ಅವರ ಹಿಂದೆಯೇ ಪ್ರಯಾಣ ಬೆಳೆಸಿದರಂತೆ. ಈ ವಿಷಯ ಈ ಸಂಗ್ರಾಮದಲ್ಲಿ ಪಾತ್ರ ವಹಿಸಿದ ವರಿಗಲ್ಲದೆ ಮತ್ತಾರಿಗೂ ತಿಳಿಯದು. ಆದರೂ ನಮ್ಮ ಸಾಹೇಬರು ಶತಪ್ರಯತ್ನಗಳಿಂದ ಈ ಕೇಸಿನ ವಿಷಯವನ್ನು ಕಂಡು ಹಿಡಿದು ರಿಪೋರ್ಟು ಮಾಡಿದರಂತೆ. ಕೊಲೆಗಾರನೂ, ಕೊಲೆಯಾದವನೂ, ಇದರಲ್ಲಿ ಭಾಗವಹಿಸಿದವರೂ, ಯಾರೂ ಇಲ್ಲದಿದ್ದರೂ, ತಮ್ಮ ಅತ್ಯದ್ಭುತವಾದ ಊಹನಾಶಕ್ತಿಯಿಂದ ವಿರ್ಸನ್ನೆಲ್ಲಾ ಕಲ್ಪಿಸಿ ಕೊನೆಗೆ ಹೀಗೆ ಹೇಳಿದರಂತೆ.—"ಈ ಕೇಸಿನಲ್ಲಿ ರಾಮಪ್ಪ ಆಳ್ವರೇ ತಿಮ್ಮಪ್ಪ ಶೆಟ್ಟರ ಹತ್ತಿರ ಹೋಗಿ ಸಂಗ್ರಾಮದ ಆಮಂತ್ರಣವಿತ್ತಿರಬೇಕು. ನೋಡಿ, ರಾಮಪ್ಪ ಎಂಬ ಶಬ್ದವನ್ನು ತೆಗೆದುಕೊಳ್ಳಿ. ಎಷ್ಟು ನಯ ವಾದ ಹೆಸರು? ಅದರ ಬದಲಿಗೆ ತಿಮ್ಮಪ್ಪ ಎಂಬ ಶಬ್ದವನ್ನು ತೆಗೆದು ಕೊಳ್ಳಿ, ಎಷ್ಟು ಬಿರುಸಾಗಿ ಬಲವಾಗಿದೆ? ಆದುದರಿಂದ ಆಳ್ವರೇ ಮೊದಲಾಗಿ ಶೆಟ್ಟರಿಗೆ ಯುದ್ಧಾಹ್ವಾನವಿತ್ತರು. ಶೆಟ್ಟರು ತಮ್ಮ ಬಿರು ಸಾದ ಹೆಸರಿನ ಸಹಾಯದಿಂದ ಆಳ್ವರನ್ನು ತೀರಿಸಿಬಿಟ್ಟರು. ಅನಂತರ ಆ ಶೆಟ್ಟರು ಸತ್ತು ಹೋದ ವಿಷಯ—ಆಳ್ವರು ಖಂಡಿತವಾಗಿ ವಿಷ ಯುಕ್ತವಾದ ಖಡ್ಗವನ್ನು ಉಪಯೋಗಿಸಿರಬೇಕು. ಏಕೆಂದರೆ ಶೆಟ್ಟರ ಶವದಹನದ ಕಾಲದಲ್ಲಿ ನಾನು ಅಲ್ಲಿಯೇ ಇದ್ದೆ. ಎಂತೆಂತಹ ವಾಸನೆ ಗಳ ಶಕ್ತಿಯನ್ನು ತಡೆಯಬಲ್ಲವನಾದ ನನಗೆ ಈ ವಾಸನೆಯನ್ನು ತಡೆಯಲಾಗಲಿಲ್ಲ. ಮೂರ್ಛೆ ಹೋಗುವ ಹಾಗಾಯಿತು. ಈ ಹೊತ್ತಿಗೆ ಉಳಿದವರೆಲ್ಲರೂ ಹಿಂದೆ ಹೋಗಿದ್ದುದರಿಂದಲೂ, ನಾನೊ ಬ್ಬನೇ ಆ ಸ್ಥಳದಲ್ಲಿದ್ದುದರಿಂದಲೂ ಸಾಕ್ಷಿಗಳನ್ನು ಒದಗಿಸಲಾರೆನು," ಎಂದು ಹೇಳಿಬಿಟ್ಟರಂತೆ. ಈ ಮೇಲಿನ ವಿಷಯಗಳ ಸಮರ್ಥನೆಗೆ, ಗೀತೆಯ ಹಲವು ಶ್ಲೋಕಗಳನ್ನೂ, ಅಕ್ಕ ಮಹಾದೇವಿಯ ಕೆಲವು ವಚನಗಳನ್ನೂ, ರನ್ನ, ಕಾಳಿದಾಸ ಮುಂತಾದವರು ಬರೆದ ಪದ್ಯ ಭಾಗಗಳನ್ನೂ ಬಾಯಿಪಾಠ ಹೇಳಿದರಂತೆ! (ಸಾಹೇಬರು ಗೀತೆ

ಯನ್ನು ಬಾಯಿಪಾಠ ಹೇಳಿದುದು ಹೇಗೆಂದು ಯಾರಿಗೂ ಗೊತ್ತಾಗ ಲಿಲ್ಲವಂತೆ.)

ಇರಲಿ! ನಮ್ಮ ಮುಖ್ಯ ವಿಷಯವನ್ನು ಬಿಟ್ಟು ಬಹಳ ದೂರ ಹೋದೆವು.

ನಮ್ಮ ಪತ್ತೇದಾರ ಮಹಾಶಯರಿಗೆ ಈ ಭಯಾನಕವಾದ ರಾತ್ರಿಯಲ್ಲಿ, ಅದೂ ಈ ಕಟ್ಟಡವಿಯಲ್ಲಿ ಕೆಲಸವೇನಿರಬಹುದು? ಮತ್ತೇನಿರಬಹುದು? ಪತ್ತೇದಾರಿಕೆಯೆ!

ನೋಡಿ! ನಮ್ಮ ಸಾಹೇಬರು ಅತ್ತಿತ್ತ ನೋಡುತ್ತ, ಸದ್ದಾಗ ದಂತೆ ಪ್ರಯತ್ನಿಸುತ್ತ, ಸ್ವಲ್ಪವೂ ಅಂಜಿಕೆಯಿಲ್ಲದೆ ಉಸಿರು ತೆಗೆಯುತ್ತ ನಡೆಯುತಿದ್ದಾರೆ. ಅಗೊ! ಅಷ್ಟರಲ್ಲಿ ದೂರದಿಂದ ಒಂದು ಶಬ್ದವು ಬಂದಂತೆ ಕೇಳಿಸಿತು. ನಿಮಗೆ ಕೇಳಿಸಲಿಲ್ಲವೆ? ಸಾಹೇಬರು ಕಿವಿ ಯನ್ನು ಅಗಲ ಮಾಡುತಿದ್ದಾರೆ. ಅಗೊ! ಮತ್ತೊಂದು ಕರ್ಕಶ ವಾದ ಧ್ವನಿಯು ತರಂಗತರಂಗವಾಗಿ ಬಂದು ಇವರ ಕರ್ಣದಲ್ಲಿದ್ದ ತಮಟೆಯ ಮೇಲೆ ಬಡಿದು ದೂರದ ಶಿಖರಗಳಲ್ಲಿ ಲೀನವಾಯಿತು. (ಈ ಲೀನ ಎಂಬ ಶಬ್ದವು ಬಹುಶಃ ಆಂಗ್ಲ ಭಾಷೆಯಲ್ಲಿರುವ "lean" ಎಂಬ ಶಬ್ದದ ಕನ್ನಡದ ತರ್ಜುಮೆಯಾಗಿರಬೇಕು. "lean" ಎಂದರೆ ಕ್ಷೀಣವೆಂದರ್ಥ.) ಸಾಮಾನ್ಯ ಮನುಷ್ಯರ ಎದೆಯು ಒಡೆದೇ ಹೋಗು ತಿತ್ತು. ಅಂತಹ ಭಯಂಕರವಾದ 'ಕೂಗು ಅದು! ಸಾಹೇಬರು ಮುಗುಳ್ನಗುತ್ತ ಮುಂದರಿದರು. ಈಗ ಮಾತ್ರ ಪಿಸ್ತೂಲನ್ನು ಸ್ವಲ್ಪ ಎತ್ತಿ ಹಿಡಿದರು. ಸ್ವಸಂರಕ್ಷಣೆಗೋಸ್ಕರ; ಭಯವಾಗಿ ಹಾಗೆ ಮಾಡಿ ದುದಲ್ಲ. ಸ್ವಲ್ಪ ಮುಂದೆ ಹೋಗುವಷ್ಟರಲ್ಲಿಯೆ ಯಾವುದೊ ಒಂದು ವ್ಯಕ್ತಿಯು, ಪತ್ತೇದಾರನ ಸೂಕ್ಷ್ಮ ಕಣ್ಣುಗಳಿಗೆ ಗೋಚರಿಸಿತು. ಆ ವ್ಯಕ್ತಿಯು ವಿಕಟವಾಗಿ ನರ್ತಿಸುತಿದ್ದಿತು. ಆಹಾ! ಎಂತಹ ಭಯಾ ನಕವಾದ ನರ್ತನವದು? ಕಾಳಭೈರವನು ತಾಂಡವವಾಡುತ್ತಿರುವನೊ ಎಂದು ಒಮ್ಮೆ ಸಾಹೇಬರಿಗೆ ಗಾಬರಿಯಾಯಿತು. ಆದರೆ ಸಾಹೇ ಬರು ಸಾಮಾನ್ಯರೆ? ತಮ್ಮ ಭೂತಕನ್ನಡಿಯನ್ನು ತೆಗೆದು ಪರೀಕ್ಷಿಸಿ

ದರು. ಆಗ ಆ ವ್ಯಕ್ತಿಯ ಮೈಮೇಲೆ ವಸ್ತ್ರವೇ ಇದ್ದಂತೆ ತೋರ ಲಿಲ್ಲ. ನಾಟ್ಯವು ಮಾತ್ರ ಚೆನ್ನಾಗಿ ಕಾಣಿಸುತಿದ್ದಿತು. ಆ ಎರಡು ಕಾಲುಗಳು ಆಯಾಸವಿಲ್ಲದೆ ಹೇಗೆ ಚಲಿಸುತಿದ್ದುವು! ದೇಹವು ಹೇಗೆ ಬಳ್ಳಿಯಂತೆ ಬಳುಕಿ, ಪುನಃ ಮೊದಲಿನ ಸ್ಥಿತಿಗೆ ಬರುತಿದ್ದಿತು? ಮುಖದ ಮೇಲೆ ತೋರುತಿದ್ದ ವಿಕಟಹಾಸ್ಯವೇನು?

ಸಾಹೇಬರು ಒಂದು ಕ್ಷಣ ಈ ಅತ್ಯದ್ಭುತವಾದ ಚಲನವಲನ ಗಳನ್ನು ನಿರೀಕ್ಷಿಸಿ, ಇದು ಯಾವುದೋ ಒಂದು ಪಿಶಾಚಿಯಾಗಿರ ಬೇಕೆಂದು ನಿರ್ಧರಿಸಿದರು. ಪಿಶಾಚಿಯ ಮೇಲೆ ಇವರಿಗೆ ನಂಬುಗೆ ಯಿಲ್ಲದಿದ್ದರೂ ಆ ವ್ಯಕ್ತಿಯು ನಗ್ನವಾಗಿ ನರ್ತಿಸುತಿದ್ದುದರಿಂದ ಹಾಗೆ ಊಹಿಸಬೇಕಾಯಿತು. ತಳುವದೆ ತಮ್ಮ ಪಿಸ್ತೂಲನ್ನು ಹಾರಿಸಿಯೇ ಬಿಟ್ಟರು. ಢಂಂಂ ಎಂಬ ಶಬ್ದದ ವಿಕಟ ನಿನಾದವು ಅಡಗುವಷ್ಟರಲ್ಲಿ ನರ್ತಿಸುತಿದ್ದ ವ್ಯಕ್ತಿಯು "ಹಾಯ್!" ಎಂದು ಮತ್ತೊಮ್ಮೆ ಸಾಹೇ ಬರು ನಡುಗುವಂತೆ ಬೊಬ್ಬಿಟ್ಟು, ಕೆಳಗೆ ಬಿದ್ದಿತು. ಹತ್ತಿರ ಹೋಗಿ ನೋಡಲಾಗಿ ನಾಡಿಯು ಚಲಿಸುತ್ತಿರಲಿಲ್ಲ.

ವ್ಯಕ್ತಿಯು ಭೂತ, ಪ್ರೇತ, ಪಿಶಾಚಾದಿ ಯಾವ ಜಾತಿಗಳಿಗೂ ಸೇರಿರಲಿಲ್ಲ. ಆ ವ್ಯಕ್ತಿಯು ಯಾರಾಗಿರಬಹುದು? ಆಲೋಚಿಸಿ, ನೋಡೋಣ.

ಆ ವ್ಯಕ್ತಿ ಸ್ವಯಂ ತಿಮ್ಮಪ್ಪ ಶೆಟ್ಟಿಯಾಗಿದ್ದಿತು.

**ಗೋಪಾಲಕೃಷ್ಣ ರಾವ್, ಹೊಸಬೆಟ್ಟು,**
(V ಫೋರ್ಮ್)

# ನಾಯಿಮರಿ ದಾಸು

ಈ ಹೊತ್ತು ನಮ್ಮ ತಂದೆಯವರು ಬೆಂಗಳೂರಿನಿಂದ ಹೊರಟು ನಮ್ಮೂರಿಗೆ ತಲುಪುವ ದಿನವಾಗಿತ್ತು. ನಾವೆಲ್ಲರೂ ಅಪ್ಪನ ಬರೋಣ ವನ್ನೇ ಕಾದುಕೊಂಡು ಚಾವಡಿಯಲ್ಲಿ ಕುಳಿತಿದ್ದೆವು. ಅಡಿಗೆ ಕೋಣೆ ಯಲ್ಲಿ ಅಮ್ಮನು ಅಪ್ಪನಿಗಾಗಿ ಕಾಫಿ ಮಾಡುತ್ತಿದ್ದಳು. ನಾನು, ಪುಟ್ಟ ರಾಮು, ಮತ್ತು ನಮ್ಮಕ್ಕ ಚಾವಡಿಯಲ್ಲಿ ಅಪ್ಪನ ಬರೋಣವನ್ನೇ ಕಾದು ಕುಳಿತಿದ್ದೆವು.

ಅಷ್ಟರಲ್ಲಿ ಜಟ್ಕಾ ಗಾಡಿಯ ಸದ್ದು ಕೇಳಬಂದಿತು. ಪುಟ್ಟ ರಾಮುವು, "ಅಪ್ಪ ಬಂದ, ಅಪ್ಪ ಬಂದ" ಎಂದು ಗಲಾಟೆ ಹಾಕಿದನು. ನಾವೆಲ್ಲರೂ ಹೋಗಿ ಅಪ್ಪನ ಸಾಮಾನನ್ನು ತಂದು ಒಳಗಿರಿಸಿದೆವು. ಅಪ್ಪನು ತಂದ ಸಾಮಾನುಗಳಲ್ಲಿ ಒಂದು ಕುಕ್ಕೆಯಿತ್ತು. ಅಪ್ಪನು ಗಾಡಿಯವನನ್ನು ಬಾಡಿಗೆ ಕೊಟ್ಟು ಕಳುಹಿಸಿದನು.

ಅಷ್ಟರಲ್ಲಿ ಪುಟ್ಟರಾಮುವು, "ಅಪ್ಪಾ, ಅಪ್ಪಾ,- ನಮಗೇನು ತಂದಿದ್ದಿ?" ಎಂದನು. ಆಗ ಅಕ್ಕನು, "ರಾಮು, ಅಪ್ಪನ ಕಾಫಿ ಕುಡಿ ದಾಗಲಿ. ನಂತರ ಎಲ್ಲಾ ಸುದ್ದಿ," ಎಂದು ತೀರ್ಮಾನ ಮಾಡಿದಳು. ಆಗ ಅಮ್ಮನು ಕುಡಿಯಲಿಕ್ಕೆಂದು ಕಾಫಿ ತಂದಿಟ್ಟಳು. ಎಲ್ಲರೂ ಕಾಫಿ ಕುಡಿದಾಯಿತು.

ಅಪ್ಪನು, "ಬಾ, ರಾಮು, ನಿನಗೆ ತಂದದ್ದನ್ನು ತೋರಿಸುವೆನು. ಬಾ," ಎಂದು ಆ ಕುಕ್ಕೆಯನ್ನು ತೆಗೆದು ಅದರ ಮುಚ್ಚಳವನ್ನು ತೆರೆದು ತೋರಿಸಿದನು. ಅದೇನು? ಒಂದು ಪುಟ್ಟ ನಾಯಿಮರಿ ಅದ ರಲ್ಲಿ ಮಲಗಿತ್ತು. ಅಷ್ಟರಲ್ಲಿ ರಾಮುವು ಓಡಿ ಹೋಗಿ ಒಂದು ಕುಕ್ಕೆ ತಂದು, "ಅಪ್ಪಾ, ಅಪ್ಪಾ, ನಾಯಿಮರಿಯನ್ನು ಇದರಲ್ಲಿಡು," ಎಂದನು.

ಅಪ್ಪನು ಅದರಲ್ಲಿ ಸ್ವಲ್ಪ ಹುಲ್ಲು ಹಾಕಿ ಅದರಲ್ಲಿ ನಾಯಿಮರಿಯನ್ನು ಮಲಗಿಸಿದನು.

ಕೆಲ ಸಮಯದಲ್ಲಿ ನಾಯಿಮರಿಯು ಕಣ್ಣು ತೆರೆಯಿತು. ರಾಮುವು, "ಹಾ, ಕಣ್ಣು ತೆರೆಯಿತಪ್ಪ," ಎಂದು ಅಡಿ ಗೆಕೋಣೆಗೆ ಹೋಗಿ ಸ್ವಲ್ಪ ಹಾಲನ್ನು ಒಂದು ಪಾತ್ರೆಯಲ್ಲಿ ತಂದು ನಾಯಿ ಮರಿಗಿಟ್ಟನು. ಆಗ ಆ ನಾಯಿಮರಿಯು ಲೊಚಲೊಚನೆ ಅದನ್ನು ಕುಡಿದು ಬಿಟ್ಟಿತು.

ಆ ದಿನ ಆ ನಾಯಿಮರಿಯೊಡನೆ ಆಡಿ ನಮಗೆ ಸಮಯ ಹೋದದ್ದು ತಿಳಿಯಲೇ ಇಲ್ಲ. ರಾಮುವು, "ಅಪ್ಪಾ, ಅದು ಇವತ್ತು ನನ್ನ ಹತ್ತಿರವೇ ಮಲಗಬೇಕು," ಎಂದು ಹಟ ಮಾಡಿದನು. ಆಗ ಅಪ್ಪನು, "ರಾಮು, ಯಾಕೆ? ಅದು ಇಡೀ ರಾತ್ರಿ ಬೊಬ್ಬಿಡುತ್ತಾ ಇದ್ದರೆ ನಿನಗೆ ಹೇಗೆ ನಿದ್ರೆ ಬೀಳುವುದು?" ಎಂದು ರಾಮುವನ್ನು ಸಮಜಾಯಿಸಿದನು. ಹಾಗೂ ಹೀಗೂ ನಾವೆಲ್ಲರೂ ಆ ರಾತ್ರಿಯನ್ನು ಕಳೆದೆವು.

*   *   *   *   *

ಮರುದಿನ ಬೆಳಿಗ್ಗೆ ರಾಮುವು ಬೇಗ ಎದ್ದು ನಮ್ಮೆಲ್ಲರನ್ನು ಎಬ್ಬಿಸಿದನು. ಆಶ್ಚರ್ಯ! ಯಾವಾಗಲೂ ರಾಮುವನ್ನು ಎಬ್ಬಿಸುತ್ತಿದ್ದ ನಮ್ಮನ್ನು ರಾಮುವು ಈ ಹೊತ್ತು ಎಬ್ಬಿಸಬೇಕೆ?

ಕಾಫಿಯಾಯಿತು.

ರಾಮುವು, "ಹೋ, ಈಗ ನಾಯಿಗೆ ಯಾವ ಹೆಸರಿಡುವುದು?" ಎಂದು ದೊಡ್ಡ ಸಮಸ್ಯೆಯನ್ನು ನಮ್ಮ ಮುಂದಿಟ್ಟನು.

"ಟೊಮ್, ಟೈಗರ್, ಜೆಕ್," ಎಂದು ನಾನೆಂದೆ.

"ಛೇ, ಛೇ, ಯಾಕೆ ಪಾಶ್ಚಾತ್ಯ ಹೆಸರುಗಳು? ಅದರ ಬದಲಿಗೆ ನಮ್ಮೂರಿನ ಹೆಸರುಗಳೇ ಆದಾವು," ಎಂದು ಅಪ್ಪ ಅಭಿಪ್ರಾಯಪಟ್ಟನು.

"ಹಾ, ಜಾಯಿ, ಆದೀತೇ?" ಎಂದುದು ನಾನು.

"ಎಲೋ, ಈ ನಾಯಿಯ ಮರಿ ಗಂಡು. ಹೆಣ್ಣು ಹೆಸರಿಡುವುದೇ?"

"ಹಾಗಾದರೆ ಯಾವುದು?" ಎಂದು ರಾಮು ದಿಕ್ಕು ತೋಚದಾದನು. ಅಪ್ಪನು ನಕ್ಕನು.

"ಅಪ್ಪನಿಗೆ ಸ್ವದೇಶಿ ಹೆಸರುಗಳೇ ಬೇಕಂತೆ. ಅಯ್ಯೊಬ್ಬಾ, ಎಂಥಾ ಗಾಂಧಿಭಕ್ತರು! ವಸ್ತ್ರ ಸ್ವದೇಶಿ ಉಡಬೇಕೆಂದಿದ್ದರೂ ನಾಯಿಯ ಹೆಸರೂ ಸಹ ಸ್ವದೇಶಿಯೇ ಆಗಬೇಕೇ?" ಎಂದು ಹುಬ್ಬುಗಳನ್ನು ಮೇಲ್ಮಾಡಿ, ಭುಜಗಳನ್ನು ಹಾರಿಸಿದೆನು ನಾನು.

"ಇರಲಿ, ಚಿಂತೆಯಿಲ್ಲ! ದಾಸು ಎಂದರಾಗದೇ?" ಎಂದು ನಮ್ಮಕ್ಕ ಹೇಳಿದಳು.

"ಓಹೋ ಆದೀತು. ಅತೀ ಸುಂದರ ಹೆಸರು," ಎಂದು ನಿರ್ಧಾರವನ್ನು ಕೊಟ್ಟೆನು.

"ಅಕ್ಕಾ, ನಿನಗೆ ಹೇಗೆ ಅದು ನೆನಪಿಗೆ ಬಂತು," ಎಂದು ಪುಟ್ಟರಾಮು ಕೇಳುವಾಗ ಎಲ್ಲರೂ ನಕ್ಕರು.

ಅಂತೂ ಇಂತೂ, ಹಾಗೂ ಹೀಗೂ, ನಾಯಿಮರಿಗೆ ದಾಸು ಎಂಬ ನಾಮಕರಣವಾಯಿತು. ಎಲ್ಲರಿಗೂ ಸಕ್ಕರೆ ಕಳುಹಿಸಬೇಕೆಂದು ರಾಮುವಿನ ಹಟ. ಸಕ್ಕರೆಗೆ ಬರಗಾಲದ ದಿನವಷ್ಟೆ? ಕಡೆಗೆ ಹೇಗೂ ಅವನಿಗೆ ಸಮಾಧಾನ ಮಾಡಿಯಾಯಿತು.

* * * * *

ಅಪ್ಪನೀಗ ಊಟಮಾಡಿ ತನ್ನ ಓದುಮನೆಯಲ್ಲಿ ಕೂತಿರುವನು. ಏನನ್ನೋ ಬರೆಯುತ್ತಿರುವನು.

ಪುಟ್ಟರಾಮು ದಾಸುವನ್ನು ಕಂಕುಳಲ್ಲಿಟ್ಟು ಅಪ್ಪನ ಮೇಜಿನೆದುರು ನಿಂತನು. ದಾಸು "ಕುಂಯಿ ಕುಂಯಿ" ಎಂದು ಅರಚುತಿದ್ದಾಗಲೆ, ಆತನನ್ನು ಮೇಜಿನ ಮೇಲೆ ಅಪ್ಪನು ಹಾಸಿಟ್ಟ ಪುಸ್ತಕದ ಮೇಲೆ ಇಟ್ಟುಬಿಟ್ಟನು. ದಾಸು, ತಿರಿಗಿ ಕುಂಯಿ ಕುಂಯಿ ಎಂದು ಅರಚಿ

ದೊಡನೆ, ಅಪ್ಪನು ಬರೆಯುವುದನ್ನು ಬಿಟ್ಟು, "ಪುಟ್ಟರಾಮು, ನಿನಗೇಕೆ ದಾಸು? ದಾಸುವಿನಿಂದ ಏನು ಮಾಡುವೆ," ಎಂದನು.

"ದಾಸು ಕುದುರೆಯಷ್ಟು ದೊಡ್ಡವನಾದಾಗ, ಅವನ ಮೇಲೆ ಕೂತು, ಹೈ ಓಡು ಎಂದು ಊರಿನಲ್ಲೆಲ್ಲಾ ಸವಾರಿ ಮಾಡುವೆನು," ಎಂದು ಪುಟ್ಟರಾಮು ದಾಸುವನ್ನು ಕಂಕುಳಲ್ಲಿ ಹಾರಿಸಿಬಿಟ್ಟನು.

ಅಲ್ಲಿಯೆ ಕೂತ ನಮ್ಮಕ್ಕ—"ಭೇಷಕ್," ಎಂದು ಪುಟ್ಟರಾಮು ವಿನ ಬೆನ್ನನ್ನು ಚಪ್ಪರಿಸಿದಳು.

"ಬೊಂಬಾಯಿಗೆ ಹೋಗಿ, ಕುದುರೆ ಪಂದ್ಯಾಟದಲ್ಲಿ ಮೊದಲು ಬಂದು, ಸಿಕ್ಕಿದ ಹಣದಿಂದ ದಾಸುವಿಗೆ ಬಂಗಾರದ ಪಟ್ಟಿ ಹಾಕಿಸು ವೆನು," ಎಂದು ಪುಟ್ಟರಾಮು ಅಪ್ಪನೊಡನೆ ತಿರಿಗಿ ಹೇಳಿಕೊಂಡನು.

"ಭೇಷಕ್," ಎಂದಳು ನಮ್ಮಕ್ಕ ಆಗ.

"ಏನು, ಪುಟ್ಟರಾಮು, ಕುದುರೆ ಪಂದ್ಯಾಟದಲ್ಲಿ ನಾಯಿಮರಿ ಯನ್ನು ನಿಲ್ಲಿಸುವರೆ?" ಎಂದು ನಾನು ಮಿಂಚಿನ ಹಾಗೆ ಮಿಂಚಿದಾಗ ಅಪ್ಪನೇನೋ ಅಂದನು.

ತಾಯಿ, ಅಕ್ಕ, ಪುಟ್ಟರಾಮು,—ಅಲ್ಲಿದ್ದವರೆಲ್ಲರೂ ನಕ್ಕರು.

**ಪಾಂಗಾಳ ಚಂದ್ರಕಾಂತ ನಾಯಕ್,**
(III ಫೋರ್ಮ್)

ಮುದ್ರಕರು
ಹೆಚ್. ಎಲ್. ಪ್ರಸಾದ್,
ಟೌನ್ ಪ್ರೆಸ್, ಪತ್ರಪ್ಪ ರೋಡ್,
ಬೆಂಗಳೂರು ಸಿಟಿ.
೧೯೪೩.

# ಗಾಂಧೀ ಕತೆಗಳು

ಸಂಪಾದಕ
ಸಿದ್ದವನಹಳ್ಳಿ ಕೃಷ್ಣಶರ್ಮ

ಗಾಂಧೀ ಸಾಹಿತ್ಯ ಭಾಂಡಾರ,
ಬೆಂಗಳೂರು

೧—೪—೦